Azadi Ka Amrit Mahotsav

ಕರ್ನಾಟಕಸರ್ಕಾರ

# ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ3(7) ಪ್ರಾ.ಪ್ರೌ.ಶಾಶಿ ಸಾಮಾನ್ಯ ವರ್ಗಾವಣೆ /01/2023-24 ದಿನಾಂಕ:15/03/2024

## : ಅಧಿಸೂಚನೆ :

**ವಿಷಯ:** 2023-24ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ಮುಖ್ಯೋಪಾಧ್ಯಾಯರು ಮತ್ತು ಸರ್ಕಾರಿ ಪ್ರೌಢಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗಳನ್ನು ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020 ಬೆಂಗಳೂರು ದಿನಾಂಕ:27/03/2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020 ದಿನಾಂಕ:22/07/2020
3. ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಬಲ ನಿಗದಿ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಇಪಿ 442 ಪಿಬಿಎಸ್ 2022 ದಿನಾಂಕ: 29/08/2022.
4. ಪ್ರೌಢಶಾಲಾ ಶಿಕ್ಷಕರ ವೃಂದಬಲ ನಿಗದಿ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಇಪಿ 01 ಎಲ್‌ಬಿಪಿ 2022 ದಿನಾಂಕ: 28/01/2022
5. ಇ.ಇ.ಡಿ.ಎಸ್ ಸುತ್ತೋಲೆ: ಇ-ಆಡಳಿತ/ಶಿಕ್ಷಕರ ಮಿತ್ರ/2020-21 ದಿನಾಂಕ: 25/08/2022
6. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ತಿದ್ದುಪಡಿ ಕಾಯ್ದೆ-2022 ಸಂಖ್ಯೆ: ಸಂವ್ಯಾಶಾಶಿ 23 ಶಾಸನ 2022 ದಿನಾಂಕ: 13/10/2022.
7. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] (ತಿದ್ದುಪಡಿ) ನಿಯಮ-2022 ಸಂಖ್ಯೆ: ಇಪಿ 91 ಇಟಿಆರ್ 2022 ದಿನಾಂಕ: 26/12/2022

*********

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ-2020 [2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04] ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮಗಳಲ್ಲಿನಂತೆ ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರನ್ನು ಒಳಗೊಂಡಂತೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗೆ ಮಾರ್ಗಸೂಚಿಗಳನ್ನೊಳಗೊಂಡಂತೆ ವೇಳಾಪಟ್ಟಿಯನ್ನು ಹಮ್ಮಿಕೊಳ್ಳಲಾಗಿದೆ.

**2020ರಲ್ಲಿ ಜಾರಿಯಾದ ಶಿಕ್ಷಕರ ವರ್ಗಾವಣೆ ಕಾಯ್ದೆಯಂತೆ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಮತ್ತು ಕಡ್ಡಾಯ ವಲಯ ವರ್ಗಾವಣೆಗಳನ್ನು ಒಂದರ ನಂತರ ಒಂದನ್ನು ಪರ್ಯಾಯ ವರ್ಷಗಳಲ್ಲಿ ಹಮ್ಮಿಕೊಳ್ಳಬೇಕಾಗಿರುತ್ತದೆ.** ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರನ್ನು ಒಳಗೊಂಡಂತೆ ಮತ್ತು ಸರ್ಕಾರಿ ಪ್ರೌಢಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗಳನ್ನು ಶೈಕ್ಷಣಿಕ ವರ್ಷದ ಆರಂಭದ ಮುಂಚೆ ಕಾಯ್ದೆಯಂತೆ ನಿರ್ವಹಿಸಬೇಕಿದೆ.

ಹಾಗೆಯೇ, ಮೇಲ್ಕಂಡಂತೆ ಪ್ರಸಕ್ತ ಸಾಲಿನ ವರ್ಗಾವಣೆ ಪ್ರಕ್ರಿಯೆಯಲ್ಲಿ ವಲಯ ವರ್ಗಾವಣೆ ಕೈಗೊಳ್ಳಬೇಕಾಗಿದ್ದು ವಲಯ ವರ್ಗಾವಣೆ ಪ್ರಕ್ರಿಯೆಯ ಸಹಿತವಾಗಿ ಶಿಕ್ಷಕರ ಸಾಮಾನ್ಯ ವರ್ಗಾವಣಾ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಲು ಮಾರ್ಗಸೂಚಿಗಳನ್ನು ಮತ್ತು ವೇಳಾಪಟ್ಟಿಯನ್ನು ಹೊರಡಿಸಲಾಗಿದೆ. ಈ ಸಂಬಂಧ ವರ್ಗಾವಣೆಗೆ ಪೂರಕವಾದ ಇ.ಇ.ಡಿ.ಎಸ್ ದತ್ತಾಂಶ, ಖಾಲಿ ಹುದ್ದೆಗಳ ಮಾಹಿತಿ, ಶಾಲಾ ವಲಯಗಳ ದತ್ತಾಂಶ ಇತ್ಯಾದಿಗಳ ಇಂದೀಕರಣವಾಗಬೇಕಾಗಿದೆ.

ಎಲ್ಲಾ ಸಾಮಾನ್ಯ/ಪರಸ್ಪರ ವರ್ಗಾವಣೆಗಳನ್ನು On Line ಮೂಲಕವೇ ನಿರ್ವಹಿಸಬೇಕಾಗಿದ್ದು ಶಿಕ್ಷಕರ (Weighted score) ಅಂಕಗಳ ಪ್ರಕಟ, ಆಕ್ಷೇಪಣೆ ಸಲ್ಲಿಕೆ, ವರ್ಗಾವಣಾ ಅರ್ಜಿ ಸಲ್ಲಿಸುವುದು, ಅರ್ಜಿಗಳ/ ಆದ್ಯತೆಗಳ ಪರಿಶೀಲನೆ, ಅರ್ಜಿಗಳ/ ಆದ್ಯತೆಗಳ ಅನುಮೋದನೆ/ ತಿರಸ್ಕಾರ, ಕರಡು ಅರ್ಹ/ ಅನರ್ಹ(ಕಾರಣ ಸಹಿತ) ಪಟ್ಟಿ ಪ್ರಕಟಣೆ, ಆಕ್ಷೇಪಣೆಗಳ ಸಲ್ಲಿಕೆ, ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ, ಆದ್ಯತಾ ಪಟ್ಟಿ ಅನುಸಾರ ವರ್ಗಾವಣಾ ಕೌನ್ಸೆಲಿಂಗ್ ಪ್ರಕ್ರಿಯೆಗಳು ಇಲಾಖೆಯ ನಿಗದಿತ ತಂತ್ರಾಂಶದಲ್ಲಿಯೇ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ವರ್ಗಾವಣೆ ಪ್ರಕ್ರಿಯೆಗಳಿಗೆ ಸಂಬಂಧಪಟ್ಟಂತೆ ಪ್ರಸ್ತುತ ಮಾರ್ಗಸೂಚಿ ಮತ್ತು ವೇಳಾಪಟ್ಟಿಯಲ್ಲಿನ ಎಲ್ಲಾ ಪದ ನಮೂದು ಮತ್ತು ಉಲ್ಲೇಖಗಳು ವರ್ಗಾವಣೆ ಕಾಯ್ದೆ ಮತ್ತು ನಿಯಮಗಳಲ್ಲಿನ ವ್ಯಾಖ್ಯೆಯಂತೆಯೇ ಇರುತ್ತವೆ. ವರ್ಗಾವಣಾ ಕಾಯ್ದೆ ಮತ್ತು ನಿಯಮಗಳಲ್ಲಿನ ವ್ಯಾಖ್ಯಾನ ಪರಿಭಾಷೆಯನ್ನು ಮತ್ತು ಅರ್ಥವ್ಯಾಪ್ತಿಯನ್ನೇ ಅವು ಹೊಂದಿದ್ದು ಪ್ರತ್ಯೇಕವಾದ ಅರ್ಥ ವಿವರಣೆ ಮತ್ತು ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಮಾರ್ಗಸೂಚಿ ಅಂಶಗಳು ಕೇವಲ ವರ್ಗಾವಣೆಗಳ ಆಡಳಿತ ನಿರ್ವಹಣೆಗಾಗಿ ಮತ್ತು ಶಿಕ್ಷಕರ ಆಕರ ಸೂಚನೆಗಾಗಿ ಮಾತ್ರ ಹೊರಡಿಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿದೆ.

**ಅಧಿನಿಯಮ ಮತ್ತು ನಿಯಮಗಳನ್ನು ಎಲ್ಲಾ ಹಂತದ ವರ್ಗಾವಣಾ ಪ್ರಾಧಿಕಾರಿಗಳು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು. ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಹಾಗೂ ಶಿಕ್ಷಕರ ವರ್ಗಾವಣೆ ಕಾಯ್ದೆ/ನಿಯಮಗಳು-2020 ಮತ್ತು ತಿದ್ದುಪಡಿ ಕಾಯ್ದೆ/ನಿಯಮಗಳು-2022ರ ಪ್ರಕಾರ ಕ್ರಮವಹಿಸಲು ಸಕ್ಷಮ ಪ್ರಾಧಿಕಾರಿಗಳಿಗೆ ಸೂಚಿಸಿದೆ.**

**ಈ ಅಧಿಸೂಚನೆಯು, ತಾಂತ್ರಿಕ/ ಆಡಳಿತಾತ್ಮಕ ಕಾರಣಗಳಿಂದಾಗಿ ವ್ಯತ್ಯಯಗಳುಂಟಾದಲ್ಲಿ ಅವಶ್ಯಕತೆಗೆ ಅನುಗುಣವಾಗಿ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟಿರುತ್ತದೆ. ಈ ಸಂಬಂಧ ವರ್ಗಾವಣಾ ಪ್ರಕ್ರಿಯೆಯನ್ನು ನಿರ್ವಹಿಸುವ ಸಲುವಾಗಿ ಮಾರ್ಗಸೂಚಿಯ ಅಂಶಗಳನ್ನು ಅನುಬಂಧ-1 ರಲ್ಲಿ ಮತ್ತು ಅನುಬಂಧ-2ರಲ್ಲಿ ವರ್ಗಾವಣಾ ವೇಳಾಪಟ್ಟಿಯನ್ನು ಹೊರಡಿಸಿದೆ.**

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020 ಬೆಂಗಳೂರು ದಿನಾಂಕ:27/03/2020 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020 ದಿನಾಂಕ:22/07/2020 ಹಾಗೂ ಇಲಾಖಾ ಆದೇಶಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು, ಪ್ರಸ್ತಾಪಿತ ವರ್ಗಾವಣಾ ಪ್ರಕ್ರಿಯೆಗಳನ್ನು ಯಾವುದೇ ಲೋಪದೋಷಗಳಿಗೆ ಎಡೆಮಾಡಿಕೊಡದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ತಿಳಿಸಿದೆ. ಒಂದು ವೇಳೆ ಇಲಾಖಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅರ್ಜಿಗಳ ಅನುಮೋದನೆ ಮತ್ತು ವರ್ಗಾವಣಾ ಕೌನ್ಸಿಲಿಂಗ್‌ನಲ್ಲಿ ಅಕ್ರಮಗಳು ಕಂಡುಬಂದಲ್ಲಿ ಅಂತಹಾ ಸಕ್ಷಮ ಪ್ರಾಧಿಕಾರದ ವಿರುದ್ದ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು

ಬಿ.ಬಿ. ಕಾವೇರಿ

**(ಬಿ.ಬಿ. ಕಾವೇರಿ)** ಭಾ.ಆ.ಸೇ.

ಆಯುಕ್ತರು.

ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು.

ಇವರಿಗೆ, ಅಗತ್ಯ ಕ್ರಮಕ್ಕಾಗಿ

1) ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ
2) ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಗುಲ್ಬರ್ಗಾ/ಧಾರವಾಡ
4) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
5) ಶಾಲಾ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
6) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು[ಆಡಳಿತ] ರವರ ಮೂಲಕ)

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಆದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.

4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ
8. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ.
9. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು ರವರಿಗೆ.
10. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು-01 ರವರಿಗೆ ಪ್ರತಿಯನ್ನು ರವಾನಿಸುತ್ತಾ, ಉದ್ದೇಶಿತ ವರ್ಗಾವಣೆ ಪ್ರಕ್ರಿಯೆಗೆ "ತಂತ್ರಾಂಶವನ್ನು" ನಿಯಮಗಳಡಿ ಸಜ್ಜುಗೊಳಿಸಿ ಯಾವುದೇ ಲೋಪಗಳು ಉದ್ಭವಿಸದಂತೆ, ಸೂಕ್ತ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
11. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
12. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
13. ಹಿರಿಯ ಸಹಾಯಕ ನಿರ್ದೇಶಕರು(ಇ-ಆಡಳಿತ) ಇವರಿಗೆ ಕಳುಹಿಸುತ್ತಾ ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
14. ಕಛೇರಿ ಪ್ರತಿ.

Azadi Ka Amrit Mahotsav

ಕರ್ನಾಟಕಸರ್ಕಾರ

**ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001**

**ಅನುಬಂಧ–1**

**ವರ್ಗಾವಣಾ ಮಾರ್ಗಸೂಚಿಗಳು:–**

➢ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು–2020ರ ನಿಯಮ–3 ರಂತೆ ಸಕ್ಷಮ ಪ್ರಾಧಿಕಾರ.–

ಶಿಕ್ಷಕರ ವರ್ಗಾವಣೆಗೆ ಸಕ್ಷಮ ಪ್ರಾಧಿಕಾರ, ಕೆಳಕಂಡ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಇರುತ್ತದೆ.

: **ಸಕ್ಷಮ ಪ್ರಾಧಿಕಾರ** :

| **ಶಿಕ್ಷಕರ ಪ್ರವರ್ಗ** | **ಸಕ್ಷಮ ಪ್ರಾಧಿಕಾರ** | |
|---|---|---|
| | **ಜಿಲ್ಲೆಯ ಒಳಗೆ ವರ್ಗಾವಣೆ** | **ಜಿಲ್ಲೆಯ ಹೊರಗೆ ವರ್ಗಾವಣೆ** |
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು | ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ) | (1)**ಅದೇ ವಿಭಾಗದ ಒಳಗೆ ವರ್ಗಾವಣೆಗೆ:** ಶಾಲಾ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ವಿಭಾಗೀಯ ಜಂಟಿ ನಿರ್ದೇಶಕರು<br>(2) **ವಿಭಾಗದ ಹೊರಗೆ ವರ್ಗಾವಣೆಗೆ:** ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ. ಬೆಂಗಳೂರು |
| ಸರ್ಕಾರಿ ಪ್ರೌಢಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು | ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ) | (1) **ಅದೇ ವಿಭಾಗದ ಒಳಗೆ ವರ್ಗಾವಣೆಗೆ:** ಶಾಲಾ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ವಿಭಾಗೀಯ ಜಂಟಿ ನಿರ್ದೇಶಕರು<br>(2)**ವಿಭಾಗದ ಹೊರಗೆ ವರ್ಗಾವಣೆಗೆ:** ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ. ಬೆಂಗಳೂರು |
| ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ವೃಂದ | --- | (1) **ಅದೇ ವಿಭಾಗದ ಒಳಗೆ ವರ್ಗಾವಣೆಗೆ:**<br>(ಎ)ಬೆಂಗಳೂರು ಮತ್ತು ಮೈಸೂರು ವಿಭಾಗಗಳು : ಜಂಟಿ ನಿರ್ದೇಶಕರು [ಆಡಳಿತ] ಆಯುಕ್ತರ ಕಛೇರಿ, ಬೆಂಗಳೂರು:<br>**(ಬಿ)ಬೆಳಗಾವಿ ವಿಭಾಗ:** ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ ಧಾರವಾಡ.<br>(ಸಿ) **ಕಲಬುರ್ಗಿ ವಿಭಾಗ:** ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ ಕಲಬುರ್ಗಿ.<br>(2) **ವಿಭಾಗದ ಹೊರಗಿನ ವರ್ಗಾವಣೆ:** ಜಂಟಿ ನಿರ್ದೇಶಕರು [ಆಡಳಿತ], ಆಯುಕ್ತರ ಕಛೇರಿ, ಬೆಂಗಳೂರು |

➢ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಪರಿಶೀಲಿಸಿ ಇಂದೀಕರಿಸಿದಂತೆ (ಅಧಿಸೂಚನೆಯನ್ನು ಹೊರಡಿಸಿದ

ದಿನಾಂಕದಲ್ಲಿದ್ದಂತೆ/ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದಲ್ಲಿದ್ದಂತೆ) ಸಂಬಂಧಿಸಿದ ಅಧಿಕಾರಿಗಳು ಖಚಿತಪಡಿಸಿದ ಖಾಲಿ ಹುದ್ದೆಗಳನ್ನು ಮಾತ್ರ ವರ್ಗಾವಣೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

- ಸಾಮಾನ್ಯ ಕೋರಿಕೆ/ಪರಸ್ಪರ ವರ್ಗಾವಣಾ ಉದ್ದೇಶಕ್ಕಾಗಿ ಶಿಕ್ಷಕರ ಸೇವಾ ಅಂಕಗಳ ಲೆಕ್ಕಾಚಾರವನ್ನು ನಿಯಮ-4ರಲ್ಲಿ ನಿರ್ದಿಷ್ಟಪಡಿಸಿದಂತೆ ಪರಿಗಣಿಸುವುದು. ಸೇವಾ ಅಂಕಗಳನ್ನು ದಿನಾಂಕ: 31/ ಡಿಸೆಂಬರ್-2023ರಲ್ಲಿದ್ದಂತೆ ಪರಿಗಣಿಸುವುದು.
- ಅಧಿನಿಯಮದ 7ನೇ ಪ್ರಕರಣದ[1]ನೇ ಉಪಪ್ರಕರಣದ ಮೇರೆಗೆ ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮ-5ರಂತೆ ವರ್ಗಾವಣೆಗೆ ನಿರ್ದಿಷ್ಟಪಡಿಸಿದ ವರ್ಗಾವಣೆ ಪರಿಮಿತಿಯು ಈ ಮುಂದಿನಂತೆ ಇರತಕ್ಕದ್ದು.

| ಕ್ರ.ಸಂ | ವರ್ಗಾವಣೆ ವಿಧ | ಉಪ ಪರಿಮಿತಿ | ಪರಿಗಣಿಸಬೇಕಾದ ಆಯಾ ವೃಂದಬಲ |
|---|---|---|---|
| 1 | ವಲಯ ವರ್ಗಾವಣೆ | 4% | ಶೈಕ್ಷಣಿಕ ತಾಲ್ಲೂಕು |
| 2 | ಕೋರಿಕೆ ವರ್ಗಾವಣೆ [ಜಿಲ್ಲೆಯ ಒಳಗೆ] | 7% | ಶೈಕ್ಷಣಿಕ ಜಿಲ್ಲೆ |
| 3 | ಕೋರಿಕೆ ವರ್ಗಾವಣೆ [ವಿಭಾಗ ಒಳಗೆ] | 2% | ವಿಭಾಗ |
| 4 | ಕೋರಿಕೆ ವರ್ಗಾವಣೆ [ವಿಭಾಗ ಹೊರಗೆ] | 2% | ವಿಭಾಗ |

- ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯೊಳಗೆ ಮಂಜೂರಾದ ಹುದ್ದೆಗಳ ಮತ್ತು ಖಾಲಿ ಹುದ್ದೆಗಳ ಗುರುತಿಸುವಿಕೆ ಹಾಗೂ ವಲಯ ವರ್ಗಾವಣಾ ಕಾರ್ಯಗಳ ಬಗ್ಗೆ ಸವಿಸ್ತಾರವಾದ ಮಾರ್ಗಸೂಚಿ ಅಂಶಗಳನ್ನು ಈ ಅಧಿಸೂಚನೆಯ ವೇಳಾಪಟ್ಟಿಯಲ್ಲಿ ಒಳಗೊಳಿಸಿದೆ..
- ವರ್ಗಾವಣಾ ಅರ್ಜಿ ಸಲ್ಲಿಸುವುದು, ಅರ್ಜಿಗಳ/ಆದ್ಯತೆಗಳ ಪರಿಶೀಲನೆ, ಅರ್ಜಿಗಳ/ಆದ್ಯತೆಗಳ ಅನುಮೋದನೆ/ತಿರಸ್ಕಾರ, ಕರಡು ಅರ್ಹ/ಅನರ್ಹ(ಕಾರಣ ಸಹಿತ) ಪಟ್ಟಿ ಪ್ರಕಟಣೆ, ಆಕ್ಷೇಪಣೆಗಳ ಸಲ್ಲಿಕೆ, ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ, ಆದ್ಯತಾ ಪಟ್ಟಿ ಅನುಸಾರ ವರ್ಗಾವಣಾ ಕೌನ್ಸೆಲಿಂಗ್ ಪ್ರಕ್ರಿಯೆಗಳು ಇಲಾಖೆಯ ನಿಗದಿತ ತಂತ್ರಾಂಶದಲ್ಲಿಯೇ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

**<u>ವರ್ಗಾವಣಾ ಅರ್ಜಿಗಳನ್ನು ಸಲ್ಲಿಸುವ ಕ್ರಮ ಮತ್ತು ಅರ್ಹತೆ:-</u>**

**[ಅ] ಕೋರಿಕೆ ವರ್ಗಾವಣೆಗಳಿಗೆ [ಜೇಷ್ಠತಾ ಘಟಕದ ಒಳಗೆ ಮತ್ತು ಹೊರಗೆ:]**

- ವರ್ಗಾವಣೆ ಪ್ರಕ್ರಿಯೆಗಳಿಗೆ ಅರ್ಜಿಯನ್ನು ಸಲ್ಲಿಸಿಕೊಳ್ಳ ಬಯಸುವವರು ನಿಯಮಿತ ವಿಧಾನದಲ್ಲಿ ಕೊನೆಯ ದಿನಾಂಕದ ಒಳಗೆ On Lineನಲ್ಲಿ ಇಇಡಿಎಸ್ ತಂತ್ರಾಂಶದ ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕು ಮತ್ತು ನಿಗದಿಪಡಿಸಿದ ದಿನಾಂಕದ ಒಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಆದ್ಯತೆ ಪ್ರಕರಣದ ಪರಿಶೀಲನೆಗೆ ಮೂಲ ದಾಖಲೆಗಳೊಂದಿಗೆ ಹಾಜರಾಗಿ ಸ್ವೀಕೃತಿ ಪಡೆಯತಕ್ಕದ್ದು.

**ಅರ್ಜಿಗಳನ್ನು ಸಲ್ಲಿಸಬಯಸುವ ಶಿಕ್ಷಕರು ಕೆಳಕಂಡ ಅಂಶಗಳನ್ನು ಗಮನಿಸಿತಕ್ಕದ್ದು:**

- ಖಾಯಂ ಪೂರ್ವ ಸೇವಾ ಅವಧಿ ತೃಪ್ತಿಕರವೆಂಬುದಾಗಿ ಘೋಷಣೆಯಾಗಿರಬೇಕು.
- ಜಿಲ್ಲೆಯೊಳಗಿನ ಅಥವಾ ಒಂದು ಜೇಷ್ಠತಾ ಘಟಕದಿಂದ ಮತ್ತೊಂದು ಜೇಷ್ಠತಾ ಘಟಕಕ್ಕೆ ಕೋರಿಕೆ ವರ್ಗಾವಣೆ ಬಯಸುವ ಶಿಕ್ಷಕರು ಅರ್ಜಿ ಸಲ್ಲಿಸಲು ವರ್ಗಾವಣೆ ಅಧಿಸೂಚನೆಯಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರಬೇಕು.
- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 [ಕರ್ನಾಟಕ ಅಧಿನಿಯಮ ಸಂಖ್ಯೆ-04ರ ಪ್ರಕರಣ 2(ಡಿ) ಪ್ರಕಾರ ಕನಿಷ್ಠ ಸೇವಾವಧಿಯನ್ನು ಎಂದರೆ ಪ್ರಸ್ತುತ ಶಾಲೆಯಲ್ಲಿ ಮೂರು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರಬೇಕು.
- ಉಲ್ಲೇಖಿತ 2020ರ ವರ್ಗಾವಣೆ ಅಧಿನಿಯಮ ಜಾರಿಯಾದ ನಂತರದಲ್ಲಿ ಆದ್ಯತೆ ಅಥವಾ ವಿನಾಯಿತಿಯನ್ನು ಇಡೀ ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ಪಡೆಯಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಇದನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

- ಆದ್ಯತೆ/ವಿನಾಯಿತಿಯನ್ನು ನಿಗದಿತ ಕಾಲಮಿತಿಯೊಳಗೆ ಕ್ಲೇಮು ಮಾಡದಿದ್ದರೆ, ಆಗ ಅದನ್ನು ನಂತರದ ಹಂತದಲ್ಲಿ ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಇಂತಹ ಅರ್ಜಿಗಳನ್ನು ತಿರಸ್ಕರಿಸದೇ ಸಾಮಾನ್ಯ ಪ್ರಕರಣದಡಿ ಪರಿಗಣಿಸಲಾಗುವುದು.
- ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಏಳು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ ವರ್ಗಾವಣೆಯನ್ನು ಕೋರುವುದಕ್ಕಾಗಿ ಎಲ್ಲಾ ಇತರ ಅರ್ಹತಾ ಷರತ್ತುಗಳ ಜೊತೆಗೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆ ವೃಂದದಲ್ಲಿ ಕನಿಷ್ಟ ಹತ್ತು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರಬೇಕು.
- ಶಿಕ್ಷಕರು ಜೇಷ್ಠತಾ ಘಟಕದ ಹೊರಗೆ ಕೋರಿಕೆ ವರ್ಗಾವಣೆ ಪಡೆದಲ್ಲಿ ಅವರು ತಮ್ಮ ಜೇಷ್ಠತೆಯನ್ನು ಕಳೆದುಕೊಳ್ಳತಕ್ಕದ್ದು ಮತ್ತು ಅವರು ವರ್ಗಾವಣೆಯಾಗಿರುವ ಹೊಸ ಜೇಷ್ಠತೆಯ ಜೇಷ್ಠತಾ ಘಟಕದ ವೃಂದದಲ್ಲಿ ಎಲ್ಲರಿಗಿಂತಲೂ ಜೇಷ್ಠತೆಯ ಕಿರಿಯವರಾಗುತ್ತಾರೆ.
- ಆದ್ಯತೆಗಳ ಕುರಿತು ವರ್ಗಾವಣಾ ಕಾಯ್ದೆ ಸೆಕ್ಷನ್/ನಿಯಮ-10ರಡಿಯಲ್ಲಿ ಸ್ಪಷ್ಟಪಡಿಸಿರುವ ಸಕ್ಷಮ ಪ್ರಾಧಿಕಾರಗಳಿಂದ ಮೂಲ ಪ್ರಮಾಣ ಪತ್ರಗಳನ್ನು ಪಡೆದು ವರ್ಗಾವಣಾ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಇಇಡಿಎಸ್ ನಲ್ಲಿ ಆದ್ಯತೆಯನ್ನು ನಮೂದಿಸಿರಬೇಕಾಗುತ್ತದೆ.
- ತಿದ್ದುಪಡಿ ಕಾಯ್ದೆ/ನಿಯಮಗಳಂತೆ ಶೇ 25%ಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳಿರುವ ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಶಿಕ್ಷಕರು ಬ್ಲಾಕ್ ಒಳಗಡೆ ವರ್ಗಾವಣೆ ಹೊಂದಲು ಅನುಮತಿಸಲಾಗಿದೆ ಹಾಗೂ ಒಂದೇ ಹುದ್ದೆ ಮತ್ತು ಬ್ಲಾಕ್‌ನಲ್ಲಿ ನಿರಂತರ 10 ವರ್ಷ ಹಾಗೂ ಬೇರೆ ಬೇರೆ ಹುದ್ದೆಗಳಲ್ಲಿ ಒಂದೇ ಬ್ಲಾಕ್‌ನಲ್ಲಿ ಕನಿಷ್ಟ 15 ವರ್ಷಗಳ ಸೇವೆ ಸಲ್ಲಿಸಿದ ಶಿಕ್ಷಕರುಗಳು ವರ್ಗಾವಣೆ ಹೊಂದಲು ಅರ್ಹರಿರುತ್ತಾರೆ.

(ಅ) **ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು**:-

ಆದ್ಯತೆ ಬಯಸಿ ಅರ್ಜಿ ಸಲ್ಲಿಸುವ ಶಿಕ್ಷಕರು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020[ಕರ್ನಾಟಕ ಅಧಿನಿಯಮ ಸಂಖ್ಯೆ:04]ರ ಅನ್ವಯ ಹಾಗೂ ಅದರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020 ರಲ್ಲಿನ ನಿಯಮ-10 ರಲ್ಲಿ ನಿರ್ದಿಷ್ಟಪಡಿಸಿರುವ ಆದ್ಯತೆಗಳ ಆಯ್ಕೆಯನ್ನು ಚಲಾಯಿಸಿ ಅರ್ಜಿ ಸಲ್ಲಿಸಬಹುದು ಹಾಗೂ ಕೋರಿರುವ ಆದ್ಯತೆಯ ಕುರಿತು ನಿಯಮಗಳಲ್ಲಿ ಸ್ಪಷ್ಟಪಡಿಸಿರುವ ಸಕ್ಷಮ ಪ್ರಾಧಿಕಾರಗಳಿಂದ ಪ್ರಮಾಣ ಪತ್ರಗಳನ್ನು ಪಡೆದು ನಿಗದಿತ ಅವಧಿಯೊಳಗೆ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಇಇಡಿಎಸ್‌ನಲ್ಲಿ ಆದ್ಯತೆಯನ್ನು ನಮೂದಿಸಿರಬೇಕಾಗುತ್ತದೆ. ಶಿಕ್ಷಕರು ಒಂದಕ್ಕಿಂತ ಹೆಚ್ಚು ಆದ್ಯತೆಯನ್ನು ವರ್ಗಾವಣೆ ಅರ್ಜಿಯಲ್ಲಿ ಆಯ್ಕೆ ಮಾಡಲು ಅವಕಾಶ ನೀಡಲಾಗಿದೆ. ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಪರಿಶೀಲನೆಗೆ ಹಾಜರುಪಡಿಸುವುದು. ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಹೋಗುವವರಿಗೂ ಸಹ ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳಂತೆ ಆದ್ಯತೆ ನಮೂದಿಸಲು ಅವಕಾಶ ಕಲ್ಪಿಸಿದೆ.

**ಆದ್ಯತೆಗಳ ವಿವರ ಮತ್ತು ಸಲ್ಲಿಸಬೇಕಾದ ಪ್ರಮಾಣ ಪತ್ರಗಳ ವಿವರ ಕೆಳಕಂಡಂತಿರುತ್ತದೆ.**

| ಕ್ರ.ಸಂ | ಆದ್ಯತೆ ಕ್ಲೇಮು | ಸಲ್ಲಿಸಬೇಕಾದ ಪೂರಕ ದಾಖಲೆಗಳು |
|---|---|---|
| 1 | ತಾಲ್ಲೂಕಿನೊಳಗೆ ಚಿಕಿತ್ಸೆ ಸಿಗದಿರುವ ಮಾರಕ ಕಾಯಿಲೆ ಅಥವಾ ಗಂಭೀರ ಕಾಯಿಲೆಯಿಂದ ಬಳಲುತ್ತಿರುವ ಶಿಕ್ಷಕ/ಶಿಕ್ಷಕಿ ಅಥವಾ ಅವರ ಪತಿ/ಪತ್ನಿ ಅಥವಾ ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ |
| 2 | ಶೇಕಡಾ 40ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಗವೈಕಲ್ಯವಿರುವ ಶಿಕ್ಷಕ/ಶಿಕ್ಷಕಿ ಅಥವಾ ಪತಿ/ಪತ್ನಿ ಅಥವಾ ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ |
| 3 | 12 ವರ್ಷಗಳ ಒಳಗಿನ ಅವಲಂಬಿತ ಮಕ್ಕಳು ಇರುವ ವಿಧವೆ /ವಿಧುರ ಅಥವಾ ವಿವಾಹ ವಿಚ್ಛೇದಿತ ಶಿಕ್ಷಕ/ಶಿಕ್ಷಕಿ | ಶಿಕ್ಷಕರ ಪತಿ ಅಥವಾ ಪತ್ನಿ ಮರಣ ಪ್ರಮಾಣ ಪತ್ರ/ ನ್ಯಾಯಾಲಯದ ಡಿಕ್ರಿ/ ಮುಸಲ್ಮಾನರಾಗಿದ್ದಲ್ಲಿ ಮಸೀದಿ ಸಮಿತಿಯಿಂದ ನೀಡಲಾದ ಖುಲನಾಮಾ, |

| | | |
|---|---|---|
| | | ತಲಾಖ್-ನಾಮ ಅಥವಾ ತಲಾಖ್-ಇ-ಮುಬಾರತ್ ಮತ್ತು ಮರುವಿವಾಹ ಮಾಡಿಕೊಳ್ಳದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್. ಹಾಗೂ ಮಗುವಿನ ವಯಸ್ಸು ಧೃಡೀಕರಿಸುವ ದಾಖಲೆ. |
| 4 | ಭಾರತೀಯ ರಕ್ಷಣಾ ದಳಗಳು ಅಥವಾ ಅರೆಮಿಲಿಟರಿ ದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿ ಹೊಂದಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಅಥವಾ ಮೃತ ಸೈನಿಕರ ಪತಿ ಅಥವಾ ಪತ್ನಿಯಾಗಿರುವ ಶಿಕ್ಷಕ | ಕಮಾಂಡಿಂಗ್ ಆಫೀಸರ್ ಅಥವಾ ನಿರ್ದೇಶಕರು, ಸೈನಿಕ ಕಲ್ಯಾಣ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ. |
| 5 | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಯ ನೌಕರರನ್ನು ವಿವಾಹವಾಗಿರುವ ಶಿಕ್ಷಕ ಅಥವಾ ಶಿಕ್ಷಕಿ | (ಶಿಕ್ಷಕರ ಪತಿ ಅಥವಾ ಪತ್ನಿ ಕರ್ತವ್ಯ ನಿರ್ವಹಿಸುತ್ತಿರುವ) ನೇಮಕಾತಿ ಪ್ರಾಧಿಕಾರದಿಂದ ಪಡೆದ ಸೇವಾ ಪ್ರಮಾಣ ಪತ್ರ. |
| 6 | ಮಹಿಳಾ ಶಿಕ್ಷಕರ ಸಂದರ್ಭದಲ್ಲಿ ಐವತ್ತು ವರ್ಷಗಳು ಮತ್ತು ಪುರುಷ ಶಿಕ್ಷಕರ ಸಂದರ್ಭದಲ್ಲಿ ಐವತ್ತೈದು ವರ್ಷಗಳನ್ನು ಮೀರಿದ ಶಿಕ್ಷಕರು | ಸೇವಾ ರಿಜಿಸ್ಟರ್ ಪ್ರಕಾರ ಡಿಡಿಪಿಐ ರವರಿಂದ ಪಡೆದ ದೃಢೀಕರಣ ಪತ್ರ. |
| 7 | ಗರ್ಭಿಣಿ ಶಿಕ್ಷಕಿ ಅಥವಾ 01 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕರು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ |

ಮೇಲಿನ ಪ್ರಕರಣಗಳಲ್ಲಿ ಆದ್ಯತೆ/ ವಿನಾಯಿತಿಗಳು ಅಧಿನಿಯಮದ ಸೆಕ್ಷನ್-10 ಮತ್ತು ನಿಯಮಗಳಲ್ಲಿನ ನಿಯಮ-10ರಂತೆ ಮತ್ತು ತಿದ್ದುಪಡಿ ಅಧಿನಿಯಮ-2022 ಹಾಗೂ ತಿದ್ದುಪಡಿ ನಿಯಮಗಳು-2022 ಸಂದರ್ಭಾನುಸಾರ ಇರುತ್ತವೆ. ಈ ಬಗ್ಗೆ ಯಾವ ಪ್ರಕರಣಗಳು ಆದ್ಯತೆ ಪಡೆಯಲು ಅರ್ಹ ಮತ್ತು ಯಾವ ಪ್ರಕರಣಗಳು ವಿನಾಯಿತಿಯನ್ನು ಪಡೆಯಲು ಅರ್ಹ ಎಂಬ ಕುರಿತಂತೆ ಸದರಿ ಸೆಕ್ಷನ್ ಮತ್ತು ನಿಯಮಗಳನ್ನು ಕಡ್ಡಾಯವಾಗಿ ಗಮನಿಸತಕ್ಕದ್ದು. ಆದ್ಯತೆ/ ವಿನಾಯಿತಿ ಕೋರುವ ಶಿಕ್ಷಕರು ಕಡ್ಡಾಯವಾಗಿ ಇಇಡಿಎಸ್‌ನಲ್ಲಿ ನಮೂದುಗಳನ್ನು ಮಾಡಿರತಕ್ಕದ್ದು ಮತ್ತು ಅಗತ್ಯ ದಾಖಲೆಗಳನ್ನು ನಿಗದಿತ ಕಾಲಾವಧಿಯಲ್ಲಿ ಸಲ್ಲಿಸಿರತಕ್ಕದ್ದು. ಈ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಅರ್ಹತೆ ಹೊಂದಿರುವ ಪ್ರಮಾಣ ಪತ್ರಗಳಾಗಿರಬೇಕು ಮತ್ತು ಪ್ರಮಾಣ ಪತ್ರಗಳನ್ನು ನಿಗದಿಪಡಿಸಿರುವ ಆಯಾ ಸಕ್ಷಮ ಪ್ರಾಧಿಕಾರಿಯವರಿಂದ ಪಡೆದಿರಬೇಕಾಗುತ್ತದೆ.

ಅಂಗವಿಕಲ ಶಿಕ್ಷಕರು ಕೇಂದ್ರ/ರಾಜ್ಯ ಸರ್ಕಾರದಿಂದ ನೀಡಲಾಗಿರುವ "UNIQUE DISABILITY ID" (ಶಾಶ್ವತ ಅಂಗವಿಕಲ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅದನ್ನು ಮತ್ತೊಮ್ಮೆ ಮರು ವೈದ್ಯಕೀಯ ಪರಿಶೀಲನೆಗೆ ಒಳಪಡಿಸುವ ಷರತ್ತಿನೊಂದಿಗೆ ಪರಿಗಣಿಸಲಾಗುವುದು, (ಕಾರಣ: ಕಳೆದ ಸಾಲಿನಲ್ಲಿ ಶಾಶ್ವತ ಅಂಗವಿಕಲ ಪ್ರಮಾಣ ಪತ್ರ ಪಡೆದಿದ್ದು ಮರು ವೈದ್ಯಕೀಯ ನೈಜತೆ ಪರಿಶೀಲನೆಯಲ್ಲಿ ಶೇ 40% ಕ್ಕಿಂತ ಕಡಿಮೆ ಅಂಗವಿಕಲತೆಯ ಪ್ರಮಾಣ ಇರುವುದು ಕಂಡುಬಂದಿದ್ದು ಇದರಿಂದ ನೈಜ ಅಂಗವಿಕಲರಿಗೆ ಆಗುವ ಅನ್ಯಾಯ/ತಾರತಮ್ಯವನ್ನು ತಪ್ಪಿಸುವುದಾಗಿದೆ)

ರಾಜ್ಯದ ಎಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿನ ಅಂಗವಿಕಲ/ವೈದ್ಯಕೀಯ ಪ್ರಕರಣದಡಿಯಲ್ಲಿ ವಿನಾಯಿತಿ/ಆದ್ಯತೆ ಕೋರುವ ಶಿಕ್ಷಕರ ವೈದ್ಯಕೀಯ ತಪಾಸಣೆ ನಡೆಸಲು ಜಿಲ್ಲಾ ಮಟ್ಟದ ತ್ರಿಸದಸ್ಯ ವೈದ್ಯಕೀಯ ಮಂಡಳಿಯನ್ನು ರಚಿಸಿ ಹೃದಯ, ಲಿವರ್, ಕಿಡ್ನಿ ಮತ್ತು ಶ್ವಾಸಕೋಶಗಳ ಸಂಬಂಧಿಸಿದ ತೀವ್ರತರನಾದ ಖಾಯಿಲೆಯಿಂದ (Terminally ill) ಅಥವಾ ಕ್ಯಾನ್ಸರ್‌ನಂತಹ ತೀವ್ರತರವಾದ (Terminally ill) ಖಾಯಿಲೆಯಿಂದ ಬಳಲುತಿದ್ದು ಪ್ರಸ್ತುತ ಚಿಕಿತ್ಸೆ ಪಡೆಯುತ್ತಿರುವ ಹಾಗೂ ಸದರಿ ಚಿಕಿತ್ಸೆ ಆ ತಾಲ್ಲೂಕಿನಲ್ಲಿ ಲಭ್ಯವಿಲ್ಲದಿರುವ ಬಗ್ಗೆ ಹಾಗೂ ಶೇ 40% ಮತ್ತು ಹೆಚ್ಚಿನ ಅಂಗವೈಕಲ್ಯತೆ ಇರುವ ಬಗ್ಗೆ ಪರೀಕ್ಷಿಸಿ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಕಡ್ಡಾಯವಾಗಿ ಖಾಯಿಲೆಯ ಸ್ವರೂಪ/ತೀವ್ರತೆ, ಶಿಕ್ಷಕರ/ಅವಲಂಬಿತರ ಭಾವಚಿತ್ರ, ಕೆ.ಜಿ.ಐ.ಡಿ ಸಂಖ್ಯೆ, ಶಾಲೆಯ ವಿಳಾಸ ಶಿಕ್ಷಕರು ಹಾಗೂ ಅವಲಂಬಿತರಿಗಿರುವ ಸಂಬಂಧದ ವಿವರವನ್ನು ಸ್ಪಷ್ಟವಾಗಿ ತ್ರಿಸದಸ್ಯ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರದಲ್ಲಿ ನಮೂದಿಸಿ ನೀಡಲು ತಮ್ಮ ಜಿಲ್ಲೆಯ ಜಿಲ್ಲಾ ಆಸ್ಪತ್ರೆಯ ಆಡಳಿತಾಧಿಕಾರಿಗಳಿಗೆ ಪತ್ರ ಬರೆದು ಕ್ರಮವಹಿಸಲು ತಿಳಿಸಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣಾ ನಿಯಂತ್ರಣ) ಅಧಿನಿಯಮ-2020ರ ಸೆಕ್ಷನ್-10(i)(2) ರಡಿಯಲ್ಲಿ ದೈಹಿಕ ಅಂಗವಿಕಲ ಪ್ರಕರಣದಲ್ಲಿ ಅರ್ಹ ಶಿಕ್ಷಕರಿಗೆ ವಲಯ ವರ್ಗಾವಣೆಯಿಂದ

ವಿನಾಯಿತಿ ಕ್ಲೇಮ್ ಮಾಡಲು ಅವಕಾಶ ಕಲ್ಪಿಸಲಾಗಿದೆ. (ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವರ್ಗಾವಣಾ ನಿಯಮ–2020ರ ನಿಯಮ–11, 12, ಮತ್ತು 16 ನ್ನು ಗಮನಿಸತಕ್ಕದ್ದು)

ವೈದ್ಯಕೀಯ ದೃಢೀಕರಣ ಪ್ರಮಾಣ ಪತ್ರಗಳನ್ನು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ವರ್ಗಾವಣೆಗೆ ಅರ್ಜಿಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಶಿಕ್ಷಕರು ಪಡೆಯಬೇಕಾಗಿದ್ದು ಸದರಿ ಪ್ರಮಾಣ ಪತ್ರವನ್ನು ವಿತರಿಸುವ ಜಿಲ್ಲಾ ಪ್ರಾಧಿಕಾರಿಯವರಿಗೆ ಆಯಾ ಉಪನಿರ್ದೇಶಕರು / ಜಂಟಿ ನಿರ್ದೇಶಕರು ಆಯಾ ವ್ಯಾಪ್ತಿಯ ಶಿಕ್ಷಕ ಅರ್ಜಿದಾರರಿಗೆ ಪರೀಕ್ಷಣೆಯನ್ನು ಹಮ್ಮಿಕೊಂಡು ತ್ರಿಸದಸ್ಯ ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮ ವಹಿಸುವಂತೆ ಇಲಾಖೆಯಿಂದ ಅಗತ್ಯ ಮಾಹಿತಿ ವಿವರಗಳನ್ನು ಒದಗಿಸಿ ಸಮನ್ವಯ ಪಾತ್ರವನ್ನು ನಿರ್ವಹಿಸುವುದು.

ವೈಧ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಲು ಅಂತಹ ಶಿಕ್ಷಕರು/ಅವಲಂಬಿತರನ್ನು ಕಡ್ಡಾಯವಾಗಿ ವ್ಯಾಪ್ತಿಯ ವಿಭಾಗೀಯ ಮಟ್ಟದ ತ್ರಿಸದಸ್ಯ ವೈದ್ಯಕೀಯ ಮಂಡಳಿಯ ಮುಂದೆ ಹಾಜರುಪಡಿಸಿ ಖಾಯಿಲೆಯ ವಿಧ/ವ್ಯಾಪ್ತಿ ಹಾಗೂ ಅಂಗವೈಕಲ್ಯತೆಯ ಪ್ರಮಾಣವನ್ನು ಖಚಿತಪಡಿಸಿಕೊಳ್ಳುವುದು. ಇದನ್ನು ಕಡ್ಡಾಯವಾಗಿ ಆಯಾ ವ್ಯಾಪ್ತಿಯ ವಿಭಾಗೀಯ ಸಹನಿರ್ದೇಶಕರು ಹಾಗೂ ಅಪರ ಆಯುಕ್ತರ ಕಛೇರಿಯಿಂದ ನಿರ್ವಹಣೆ ಮಾಡತಕ್ಕದ್ದು.

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ,2020 ಮತ್ತು ನಿಯಮಗಳಂತೆ,**

- ಮೇಲಿನ ಕೋಷ್ಟಕದ (1) ರಿಂದ (4)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಕೋರಿಕೆ ವರ್ಗಾವಣೆ ಅಡಿಯಲ್ಲಿ ಆದ್ಯತೆಗೆ ಮತ್ತು ಇತರೆ ವರ್ಗಾವಣೆಗಳಲ್ಲಿ ವಿನಾಯಿತಿಗಳಿಗೆ ಅರ್ಹರಾಗಿರುತ್ತಾರೆ. ಆದ್ಯತೆಗಳನ್ನು ಶಿಕ್ಷಕರ ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರವೇ ಕ್ಲೇಮು ಮಾಡತಕ್ಕದ್ದು.
- ಮೇಲಿನ ಕೋಷ್ಟಕದ (1) ರಿಂದ (4)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳನ್ನು ವಿಶೇಷ ಪ್ರವರ್ಗಗಳೆಂದು ವರ್ಗೀಕರಿಸಲಾಗಿದೆ. ಈ ಪ್ರವರ್ಗಗಳ ಅಡಿಯಲ್ಲಿ ಮಾಡಲಾದ ವರ್ಗಾವಣೆಗಳನ್ನು ಅಧಿನಿಯಮದ 7ನೇ ಪ್ರಕರಣದ[1]ನೇ ಉಪಪ್ರಕರಣದ ಮೇರೆಗೆ ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು–2020ರ ನಿಯಮ–5ರಂತೆ ಹಾಗೂ ತಿದ್ದುಪಡಿ ಅಧಿನಿಯಮ–2020ರ ಸೆಕ್ಷನ್–3ರಂತೆ ಕಲ್ಯಾಣ ಕರ್ನಾಟಕ ಪ್ರದೇಶ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳು ಮತ್ತು ಮಲೆನಾಡು ಪ್ರದೇಶದ ಶೈಕ್ಷಣಿಕ ತಾಲ್ಲೂಕುಗಳಿಗೆ ವರ್ಗಾವಣೆ ಪಡೆಯುವವರಿಗೆ ನಿರ್ದಿಷ್ಟಪಡಿಸಿದ ಶೇಕಡಾ ಹದಿನೈದರ ವರ್ಗಾವಣೆ ಮಿತಿಗಳ ಅಡಿಯಲ್ಲಿ ಲೆಕ್ಕ ಹಾಕತಕ್ಕದ್ದಲ್ಲ.
- ಮೇಲಿನ ಕೋಷ್ಟಕದ (5)ನೇ ಪ್ರವರ್ಗದ ಅಡಿಯಲ್ಲಿ ಬರುವ ಶಿಕ್ಷಕರಿಗೆ ಕೋರಿಕೆ ವರ್ಗಾವಣೆಯ ಅವಧಿಯಲ್ಲಿ ಪ್ರಾಶಸ್ತ್ಯವನ್ನು ನೀಡತಕ್ಕದ್ದು, ಶಿಕ್ಷಕನು, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಲ್ಲದೆ ಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯೊಳಗೆ ಮಾತ್ರವೇ ವರ್ಗಾವಣೆಯನ್ನು ಕೋರುವುದಕ್ಕೆ ಅನುಮತಿಸಬಹುದು. ಇಬ್ಬರು ಒಂದೇ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಆಗ ಆದ್ಯತೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಿರುವುದಿಲ್ಲ. ಆದರೆ ಸದರಿ ಪ್ರವರ್ಗದ ಶಿಕ್ಷಕರು ವಲಯವಾರು ವರ್ಗಾವಣೆಗಳ ಅವಧಿಯಲ್ಲಿ ಶಿಕ್ಷಕರ ಪತಿ/ ಪತ್ನಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನ ಒಳಗೆ ಸ್ಥಳನಿಯುಕ್ತಿಗೆ ಅರ್ಹರಿರುತ್ತಾರೆ.
- ಕೋಷ್ಟಕದ (6) ರಿಂದ (7)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಕೋರಿಕೆ ವರ್ಗಾವಣೆಯಲ್ಲಿ ಯಾವುದೇ ಆದ್ಯತೆಗೆ ಅರ್ಹರಿರುವುದಿಲ್ಲ. ಆದರೆ ಸದರಿ ಪ್ರವರ್ಗದ ಶಿಕ್ಷಕರು ವಲಯವಾರು ವರ್ಗಾವಣೆಗಳಡಿಯಲ್ಲಿನ ವಿನಾಯಿತಿಗಳಿಗೆ ಮಾತ್ರ ಅರ್ಹರಾಗಿರುತ್ತಾರೆ.

- **ಕೋರಿಕೆ ವರ್ಗಾವಣಾ ಅರ್ಜಿಗಳಿಗೆ ಶಿಕ್ಷಕರು ಸಲ್ಲಿಸಿರುವ ಆಯಾ ವೃಂದದ ಸೇವೆಯನ್ನು ಆಧರಿಸಿ ಸೇವಾ ಅಂಕಗಳು [ವೇಯ್ಟೇಡ್ ಅಂಕಗಳು] ಕೆಳಕಂಡಂತೆ ನಿಗದಿಪಡಿಸಿದೆ.**

**ಶಿಕ್ಷಕರ** Weighted score **(ಆಯಾ ವೃಂದದ ಸೇವಾ ಅಂಕಗಳು) ಲೆಕ್ಕಾಚಾರ:–**

(ಎ) ಶಿಕ್ಷಕರ ವರ್ಗಾವಣೆ ಉದ್ದೇಶಕ್ಕಾಗಿ = ('ಸಿ' ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ X 3 ಅಂಕ) + ('ಬಿ' ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ X 2 ಅಂಕ) + ('ಎ' ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ X 1 ಅಂಕ) + (ಮೂರು ವರ್ಷಗಳಿಗೆ ಮೀರಿ ಹಾಲಿ ಶಾಲೆಯಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ X 1 ಅಂಕ)

**ಟಿಪ್ಪಣಿ:-** ಆರು ತಿಂಗಳ (180 ದಿನಗಳ) ಹಾಗೂ ಮೇಲಿನ ಸೇವೆಯನ್ನು ಒಂದು ಪೂರ್ಣ ವರ್ಷವೆಂದು ಪರಿಗಣಿಸತಕ್ಕದ್ದು. ಆರು ತಿಂಗಳಿಗಿಂತ (180 ದಿನಗಳು) ಕಡಿಮೆ ಸೇವೆಯನ್ನು "ಶೂನ್ಯ" ವರ್ಷದ ಸೇವೆಯೆಂದು ಪರಿಗಣಿಸತಕ್ಕದ್ದು. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮ 4ರಂತೆ ಎಲ್ಲಾ ಶಿಕ್ಷಕರ ಸೇವಾ ಅಂಕಗಳನ್ನು ವರ್ಗಾವಣೆ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಲೆಕ್ಕಾಚಾರ ಮಾಡುವುದು.

ಉದಾಹರಣೆ:- ಸೇವಾ ಅಂಕಗಳ ಲೆಕ್ಕಾಚಾರ.

| SCHOOL CODE | ZONE | SERVICE FROM DATE | SERVICE TO DATE | SERVICE IN DAYS |
|---|---|---|---|---|
| 29191304002 | C | 09-JUL-1981 | 07-JUL-1988 | 2556 |
| 29191309502 | C | 07-JUL-1988 | 16-JUN-1990 | 710 |
| 29190243401 | B | 16-JUN-1990 | 01-JUN-2000 | 3639 |
| 29190244102 | A | 01-JUN-2000 | 21-JUL-2010 | 3703 |
| 29190214501 | B | 21-JUL-2010 | 21-JUL-2016 | 2193 |
| 29190203201 | B | 21-JUL-2016 | 31-DEC-2019 | 1259 |

| ZONE | TOTAL SERVICE IN DAYS | WEIGHTED SCORE |
|---|---|---|
| A | 3703 | 10 |
| B | 7091 | 40 |
| C | 3266 | 27 |
| PRESENT SCHOOL SERVICE ABOVE THREE YEARS | 179 | 00 |
| | TOTAL WEIGHTED SCORE | 77 |

- **ಶಿಕ್ಷಕರ ಸೇವಾ ಅಂಕಗಳು ಮತ್ತು ಲಭ್ಯವಿರುವ ಹುದ್ದೆಗಳ ಮಾಹಿತಿ ಕುರಿತು ಇಇಡಿಎಸ್ ವರದಿ ಪ್ರಕಟಿಸುವುದು**

ಈ ಪ್ರಕ್ರಿಯೆಗೆ ಈಗಾಗಲೇ ಹಮ್ಮಿಕೊಳ್ಳಲಾಗಿರುವ ವೇಳಾಪಟ್ಟಿಯಂತೆ ಅಗತ್ಯ ಇಂದೀಕರಣಗಳ ನಂತರದಲ್ಲಿ ವರ್ಗಾವಣಾ ನಿಯಮ 4[ಡಿ] ಮತ್ತು [ಇ] ರಂತೆ ಇಇಡಿಎಸ್ ವರದಿಯನ್ನು ಪ್ರಕಟಿಸಲಾಗುತ್ತದೆ. ಅದರಂತೆ ಮಾಹಿತಿಗಳಿಗನುಗುಣವಾಗಿ ವಿವರಗಳು ಇದ್ದು ಅದರಂತೆ ಆಯಾ ಹಂತದ ವರ್ಗಾವಣೆಗಳ ನಂತರದಲ್ಲಿ ಮುಂದಿನ ಹಂತಗಳಿಗೆ ಕ್ಯಾರಿ-ಫಾರ್ವಡ್ ರೀತಿಯಲ್ಲಿ ಆಯಾ ಮಾಹಿತಿಗಳು ಇರುತ್ತವೆ ಮತ್ತು ಆಯಾ ಹಂತಗಳಲ್ಲಿ ಅವಶ್ಯಕವಿದ್ದಲ್ಲಿ ಸದರಿ ವರದಿ ಮಾಹಿತಿಗಳನ್ನು ಪ್ರಕಟಿಸಲಾಗುತ್ತದೆ.

- **ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರ ವರ್ಗಾವಣೆ:-**

1) ಗರಿಷ್ಠ ಅವಧಿಯನ್ನು ಪೂರ್ಣಗೊಳಿಸಿ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರನ್ನು ಜಿಲ್ಲೆಯಲ್ಲಿ / ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿದ್ದಲ್ಲಿ ವಿಭಾಗದೊಳಗೆ ಯಾವುದೇ ಖಾಲಿ ಹುದ್ದೆಗೆ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಶಾಲೆಗಳಿಗೆ ವರ್ಗಾವಣೆ ಮಾಡತಕ್ಕದ್ದು. ಜಿಲ್ಲೆಯ ವ್ಯಾಪ್ತಿಯೊಳಗೆ ಖಾಲಿ ಸ್ಥಾನಗಳು ಇಲ್ಲದಿದ್ದಲ್ಲಿ, ಶಿಕ್ಷಕರನ್ನು ಅತಿ ಹೆಚ್ಚಿನ ಪಿ.ಟಿ.ಆರ್. ಅನುಪಾತ ಹೊಂದಿರುವ ಶಾಲೆಗಳಿಗೆ ವರ್ಗಾವಣೆ ಮಾಡತಕ್ಕದ್ದು.

2) ಮೇಲಿನ ಹುದ್ದೆಗಳಲ್ಲಿ ಕನಿಷ್ಠ ಮೂರು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿ 5 ವರ್ಷ ಪೂರ್ಣಗೊಳಿಸದ ಶಿಕ್ಷಕರು, ವರ್ಗಾವಣೆ ಪ್ರಕ್ರಿಯೆಯ ಅವಧಿಯಲ್ಲಿ ಖಾಲಿ ಹುದ್ದೆಗಳಿಗೆ ವರ್ಗಾವಣೆಯನ್ನು ಕೋರಬಹುದು. 3 ವರ್ಷಗಳ ಅವಧಿಯನ್ನು ಪೂರೈಸಿರುವ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ನಂತರದಲ್ಲಿ ಕೌನ್ಸಿಲಿಂಗ್ ನಡೆಯಲಿದ್ದು ಅವರಿಗೆ ಅವರ ಆಯ್ಕೆಯ / ಖಾಲಿ ಹುದ್ದೆಯು ಸಿಗದಿದ್ದರೆ ಅವರು ಗರಿಷ್ಠ ಅವಧಿಯನ್ನು ಪೂರ್ಣಗೊಳಿಸುವವರೆಗೆ, ನಿರ್ದಿಷ್ಟಪಡಿಸಿದ ಹುದ್ದೆಯಲ್ಲಿ ಮುಂದುವರಿಯತಕ್ಕದ್ದು.

3) ಪರಂತು, ಮೇಲಿನ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರ ಕಾರ್ಯಸಾಧನೆಯು ತೃಪ್ತಿಕರವಾಗಿಲ್ಲದಿದ್ದರೆ, ಅವರನ್ನು ಜಿಲ್ಲೆಯ 'ಸಿ' ವಲಯದಲ್ಲಿರುವ ಯಾವುದೇ ಖಾಲಿ ಹುದ್ದೆಗೆ ಸಹ ವರ್ಗಾವಣೆ ಮಾಡಬಹುದು.

4) ನಿರ್ದಿಷ್ಟ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು 5 ವರ್ಷ ಪೂರ್ಣಗೊಳಿಸಿದವರನ್ನು ಸದರಿ ಹುದ್ದೆಯಿಂದ ಶಾಲೆಗಳಿಗೆ ಹಿಮ್ಮುಖ ವರ್ಗಾವಣೆ ಮಾಡುವಾಗ ಆಧ್ಯತೆಗಳನ್ನು ನಿಯಮ-10 ಮತ್ತು 15 ರಂತೆ ಪರಿಗಣಿಸಿ ಸ್ಥಳ ನಿಯುಕ್ತಿಗೊಳಿಸಲಾಗುವುದು.

5) ಪ್ರಸಕ್ತ ಕನಿಷ್ಟ 3 ವರ್ಷಗಳ ಸೇವೆಯನ್ನು ನಿರ್ದಿಷ್ಟ ಹುದ್ದೆಯಲ್ಲಿ ಪೂರ್ಣಗೊಳಿಸಿದವರು ಪ್ರಸ್ತುತ ನಡೆಯುವ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

6) ಮೇಲಿನ ಎರಡೂ ಪ್ರಕರಣಗಳಲ್ಲಿ ನಿರ್ದಿಷ್ಟ ಹುದ್ದೆಗಳಿಗೆ ನಿಗದಿಪಡಿಸಿದ ಪರೀಕ್ಷೆಯಲ್ಲಿ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ಜ್ಯೇಷ್ಠತಾ ಕ್ರಮಾಂಕವನ್ನು ನಿಗದಿಪಡಿಸಲಾಗುವುದು. ಇಬ್ಬರು ಶಿಕ್ಷಕರ' ಅಂಕ ಸಮವಾಗಿದ್ದಲ್ಲಿ ಸೇವೆಗೆ ಸೇರಿದ ದಿನಾಂಕ ನಂತರ ಜನ್ಮದಿನಾಂಕವನ್ನು ಪರಿಗಣಿಸಲಾಗುವುದು.

7) ಶಿಕ್ಷಕರ ಸೇವಾ ಅಂಕಗಳು ಕೌನ್ಸಿಲಿಂಗ್‌ಗೆ ಮೂಲ ಆಧಾರವಾಗಿರತಕ್ಕದ್ದು.

- **ಪರಸ್ಪರ ವರ್ಗಾವಣೆಗಳಿಗೆ ಅವಕಾಶಗಳು ಅಧಿನಿಯಮದ ಖಂಡ 7ರ ಮತ್ತು ನಿಯಮಗಳ ನಿಯಮ 24 ರನುಸಾರ ಕೆಳಗಿನಂತೆ ಇರುತ್ತವೆ.**

**ಅರ್ಹತೆ:**

1. ಕನಿಷ್ಠ ಐದು ವರ್ಷಗಳ ಸೇವಾವಧಿಯನ್ನು ಹಾಗೂ ಹಾಲಿ ಶಾಲೆಯಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರಬೇಕು:
2. ನಿವೃತ್ತಿಗಿಂತ ಮುಂಚೆ, ಕನಿಷ್ಠ ಐದು ವರ್ಷಗಳ ಉಳಿಕೆ ಸೇವೆಯನ್ನು ಹೊಂದಿರಬೇಕು:
3. ಇಬ್ಬರೂ ಶಿಕ್ಷಕರು ಪರಸ್ಪರ ವರ್ಗಾವಣೆ ಕೋರಿದಾಗ, ಪ್ರತಿಯೊಬ್ಬರು ಕೆಜಿಐಡಿ ಸಂಖ್ಯೆಗಳ ಮುಖಾಂತರ ಅವರ ಅರ್ಜಿಗಳನ್ನು ಲಿಂಕ್ ಮಾಡುವ ಮೂಲಕ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯಿಂದ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಶಿಕ್ಷಕ ವರ್ಗಾವಣೆ ಪೋರ್ಟಲ್‌ನಲ್ಲಿ ಗೊತ್ತುಪಡಿಸಿದ ಸಮಯದಲ್ಲಿ ಇಬ್ಬರೂ ಅರ್ಜಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
4. ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಏಳು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ ವರ್ಗಾವಣೆಯನ್ನು ಕೋರುವುದಕ್ಕಾಗಿ ಎಲ್ಲಾ ಇತರ ಅರ್ಹತಾ ಷರತ್ತುಗಳ ಜೊತೆಗೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆ ವೃಂದದಲ್ಲಿ ಹತ್ತು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರಬೇಕು.
5. ಸಕ್ಷಮ ಪ್ರಾಧಿಕಾರವು, ಅರ್ಹ ಸಂದರ್ಭಗಳ (ಪ್ರಕರಣಗಳ) ಅಂತಿಮ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

- **ಶಿಸ್ತು ಪ್ರಕರಣಗಳನ್ನು ಎದುರಿಸುತ್ತಿರುವ ಶಿಕ್ಷಕರ ವರ್ಗಾವಣೆಗಳು:–**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು[ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ, 2020ರ ಪ್ರಕರಣ(7)ರಲ್ಲಿ ಸ್ಪಷ್ಟಪಡಿಸಿರುವಂತೆ ಕರ್ನಾಟಕ ನಾಗರೀಕ ಸೇವಾ [ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು] ನಿಯಮಗಳು–1957ರಡಿ ಶಿಸ್ತು ಪ್ರಕರಣಗಳನ್ನು ಎದುರಿಸುತ್ತಿರುವ ಶಿಕ್ಷಕರು ಅಥವಾ ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿರುವ ಶಿಕ್ಷಕರು ಕನಿಷ್ಠ ಸೇವಾವಧಿ ಪೂರೈಸದಿದ್ದರೂ ಸಹ, ಇವರನ್ನು "ಸಿ" ವಲಯದಲ್ಲಿ ಖಾಲಿ ಇರುವ ಹುದ್ದೆಗೆ ವರ್ಗಾಯಿಸತಕ್ಕದ್ದು. ಹಾಗೂ ಶೇ 25% ಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳಿರುವ ತಾಲ್ಲೂಕಿನ 'ಸಿ' ವಲಯದ ಶಾಲೆಯ ಖಾಲಿ ಹುದ್ದೆಗಳನ್ನು ಪರಿಗಣಿಸತಕ್ಕದ್ದು. ಪರಂತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು[ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು,2020ರ ನಿಯಮ–28(1) ರಂತೆ ಈ ವರ್ಗಾವಣೆಗಳನ್ನು ಸಾಮಾನ್ಯ ವರ್ಗಾವಣಾ ಪ್ರಕ್ರಿಯೆಗಳು ಮುಕ್ತಾಯಗೊಂಡ ನಂತರ ನಡೆಸಲು ಸಕ್ಷಮ ಪ್ರಾಧಿಕಾರಿಗಳು ಕ್ರಮ ವಹಿಸುವುದು.

**<u>ವರ್ಗಾವಣಾ ಅರ್ಜಿಗಳ ಕುರಿತು ಕ್ಷೇತ್ರಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು, ವಿಭಾಗೀಯ ಸಹನಿರ್ದೇಶಕರು ಮತ್ತು ಸಂದರ್ಭಾನುಸಾರ ಆಯಾ ವರ್ಗಾವಣಾ ಪ್ರಾಧಿಕಾರಿಯವರು ಪಟ್ಟಿ ಪ್ರಕಟಣೆಗೆ ವಹಿಸಬೇಕಾದ ಕ್ರಮಗಳು</u> :**

ಆಯಾ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಯವರು ಎಲ್ಲಾ ರೀತಿಯ ವರ್ಗವಣೆಗಳಿಗೆ ಸಂಬಂಧಪಟ್ಟಂತೆ ಅರ್ಜಿ ನೋಂದಣಿ ಪ್ರಾಧಿಕಾರಿಯವರಾಗಿರುತ್ತಾರೆ. ಸದರಿ ಅಧಿಕಾರಿಯವರು ವ್ಯಾಪ್ತಿಯ ಆಡಳಿತ ಉಪನಿರ್ದೇಶಕರ ಮತ್ತು ಉನ್ನತ ಮಟ್ಟದಲ್ಲಿ ವ್ಯಾಪ್ತಿಯ ವಿಭಾಗೀಯ ಸಹನಿರ್ದೇಶಕರ ಮಾರ್ಗದರ್ಶನ ಮತ್ತು ನಿಗಾದಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಸಂದರ್ಭಾನುಸಾರ ಅನುಮೋದನೆ ಪಡೆಯಬೇಕಾದ ವೃಂದಗಳ ಅರ್ಜಿ ಪ್ರಕರಣಗಳಲ್ಲಿ ಕಡ್ಡಾಯವಾಗಿ ವ್ಯಾಪಿಯ ಉಪನಿರ್ದೇಶಕರು ಮತ್ತು ಆ ಮೂಲಕ ವಿಭಾಗೀಯ ಸಹನಿರ್ದೇಶಕರ ಅನುಮೋದನೆಯನ್ನು ಪಡೆದುಕೊಂಡು ಆಯಾ ವೃಂದಗಳ ಅರ್ಜಿಗಳ ಕುರಿತಾದ ಪಟ್ಟಿಗಳನ್ನು ಪ್ರಕಟಿಸಲು ಅಧೀನ ಕಾರ್ಯ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು. ಆಯಾ ಉಪನಿರ್ದೇಶಕರು ಸಂದರ್ಭಾನುಸಾರ ಆಯಾ ವೃಂದಗಳ ಅರ್ಜಿಗಳ / ಪಟ್ಟಿಗಳ ಪ್ರಕಟಣೆಗೆ ಜವಾಬ್ದಾರರಾಗಿರುತ್ತಾರೆ.

ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದ ಸೇರಿದಂತೆ ಎಲ್ಲಾ ವೃಂದಗಳ ವಿಭಾಗ ಮಟ್ಟದ ಪಟ್ಟಿಗಳ ಪ್ರಕಟಣೆಗೆ ಆಯಾ ವಿಭಾಗೀಯ ಸಹನಿರ್ದೇಶಕರು ಜವಾಬ್ದಾರರಾಗಿದ್ದು ಸದರಿ ಪಟ್ಟಿಗಳ ಆಧಾರದಲ್ಲಿಯೇ

ಒ

ವರ್ಗಾವಣೆ ಕ್ರಮಗಳನ್ನು ಆಯಾ ವರ್ಗಾವಣಾ ಪ್ರಾಧಿಕಾರಿಯವರು ಕೈಗೊಳ್ಳಲಿದ್ದಾರೆ. ಹಾಗೆಯೇ, ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದದ ಅಧಿಕಾರಿಯವರ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಖಾಲಿ ಹುದ್ದೆಗಳ ಮಾಹಿತಿ ಇಂದೀಕರಣ, ಅರ್ಜಿದಾರರ ಅಹವಾಲು ಆಲಿಕೆ ಅಥವಾ ಅಧಿಕಾರಿಯವರ ವಿರುದ್ಧ ಶಿಸ್ತು ಪ್ರಕರಣ ಇದ್ದರೆ ಸದರಿ ಮಾಹಿತಿಗಳನ್ನು ಪಡೆದುಕೊಂಡು ವರ್ಗಾವಣೆ ತಂತ್ರಾಂಶದಲ್ಲಿ ಇಂದೀಕರಿಸುವ ಜವಾಬ್ದಾರಿ ಮುಂತಾದ ಎಲ್ಲಾ ಸಾಂದರ್ಭಿಕ ಜವಾಬ್ದಾರಿಗಳು ಆಯಾ ವಿಭಾಗೀಯ ಸಹನಿರ್ದೇಶಕರ ಮೇಲೆಯೇ ಇರುತ್ತದೆ. ಅಂತರ ವಿಭಾಗದ ವರ್ಗಾವಣೆ ಅರ್ಜಿಗಳ ಕುರಿತಂತೆಯೂ ಆಯಾ ವಿಭಾಗೀಯ ಸಹನಿರ್ದೇಶಕರು ಇಂದೀಕರಿಸಿದ ಮಾಹಿತಿಗಳಿಗನುಗುಣವಾಗಿ ವರ್ಗಾವಣೆ ಕ್ರಮಗಳನ್ನು ಆಯಾ ವರ್ಗಾವಣೆ ಪ್ರಾಧಿಕಾರಿಯವರು ನಿರ್ವಹಿಸುತ್ತಾರೆ.

- **ವಲಯ ವರ್ಗಾವಣೆ ಕ್ರಮಗಳಿಗೆ ಮತ್ತು ಕೋರಿಕೆ ವರ್ಗಾವಣೆಗಳಿಗೆ ಸ್ವೀಕೃತವಾಗುವ ಅರ್ಜಿಗಳ/ಆದ್ಯತೆಗಳ ಪರಿಶೀಲನೆ ಮತ್ತು ಅಂತಿಮ ಪಟ್ಟಿಗಳ ಪ್ರಕಟಣೆ :-**

ಶಿಕ್ಷಕ ವೃಂದದವರು ಅಂತರ್ಜಾಲದ [On Line] ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು [ಹೆಸರು, ಜನ್ಮ ದಿನಾಂಕ, ಪದನಾಮ, ಶಾಲಾ, ಕಾಲೇಜು, ಕಛೇರಿ ವಿಳಾಸ,ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಎಲ್ಲಾ ಶಾಲೆಗಳ ಸೇವಾ ವಿವರ, ಬಯಸಿರುವ ಆದ್ಯತೆ, ಇತ್ಯಾದಿ] ಸರಿಯಿದೆಯೇ? ಎಂಬುದನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಅರ್ಜಿ ಸಲ್ಲಿಸಿರುವ ಶಿಕ್ಷಕರ ಸೇವಾ ವಹಿಯನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

- **ಪರಸ್ಪರ ವರ್ಗಾವಣೆಗೆ ಅರ್ಜಿಗಳ ಪರಿಶೀಲನೆ:-**

ಪರಸ್ಪರ ವರ್ಗಾವಣೆಗೆ ಸಲ್ಲಿಸಿರುವ ಒಂದೇ ಅರ್ಜಿಯನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಶಿಕ್ಷಕರು-1 ಮತ್ತು ಶಿಕ್ಷಕರು-2ರ ಮಾಹಿತಿ ಸರಿ ಇದೆ ಎಂಬುದನ್ನು ಪರಿಶೀಲಿಸಿ ಸರಿ ಇದ್ದಲ್ಲಿ ಅನುಮೋದನೆ ನೀಡತಕ್ಕದ್ದು.ಇಬ್ಬರು ಶಿಕ್ಷಕರು ಒಂದೇ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಶಿಕ್ಷಕರು-1ರ ಮಾಹಿತಿ ಮತ್ತು ಶಿಕ್ಷಕರು-2ರ ಮಾಹಿತಿ ಸರಿ ಇದೆ ಎಂಬುದನ್ನು ಸಹ ಪರಿಶೀಲಿಸಿ ಅನುಮೋದನೆ ನೀಡತಕ್ಕದ್ದು.

ಪರಸ್ಪರ ವರ್ಗಾವಣೆಗೆ ಇಚ್ಚಿಸುವ ಶಿಕ್ಷಕರುಗಳು ಇಬ್ಬರೂ ಸಹಾ ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇದರಲ್ಲಿ ಒಬ್ಬರು ಅರ್ಜಿ ಸಲ್ಲಿಸಿ ಮತ್ತೊಬ್ಬರು ಅರ್ಜಿ ಸಲ್ಲಿಸದಿದ್ದಲ್ಲಿ ಅಂತಹಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

- **ಆಯಾ ವೃಂದದಲ್ಲಿ ಸಲ್ಲಿಸಿದ ಸೇವೆಯ Weighted ಬಗ್ಗೆ ಪರಿಶೀಲನೆ:-**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 [ಕರ್ನಾಟಕ ಅಧಿನಿಯಮ ಸಂಖ್ಯೆ:04]ರಲ್ಲಿನ ಅಧಿಸೂಚನೆಯನುಸಾರ ಎ, ಬಿ, ಸಿ ವಲಯಗಳ ಪ್ರಕಾರ ಪ್ರಸ್ತುತ ವೃಂದದಲ್ಲಿನ ಎಲ್ಲಾ ಸ್ಥಳಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪ್ರಸ್ತುತ ದಿನಾಂಕದವರೆಗೆ ಸರಿಯಾಗಿ ದಾಖಲು ಮಾಡಿದ್ದಾರೆಯೇ ಎಂಬ ಬಗ್ಗೆಯೂ ಸಹ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಶಿಕ್ಷಕ ಮಿತ್ರ/ಇಇಡಿಎಸ್ ತಂತ್ರಾಂಶದಲ್ಲಿ ಪರಿಶೀಲಿಸಿ ಪ್ರಮಾಣೀಕರಿಸಿರತಕ್ಕದ್ದು. ಈ ಬಗ್ಗೆ ನಿಯಮ 4ಡಿ ಮತ್ತು ಇ ಯಂತೆ ಪ್ರಕಟಿಸಲಾಗುವ Weighted score ಪಟ್ಟಿಯಂತೆ ವೇಯ್ಟೇಜ್ ಇದ್ದು ಅದರಂತೆ ಅಧಿನಿಯಮದ ಖಂಡ-2ಇ ಪರಿಭಾಷೆಯಂತೆ ಎಲ್ಲಾ ವರ್ಗಾವಣೆಗಳಿಗೆ ಆದ್ಯತಾ ಕ್ರಮ ಇರುತ್ತದೆ.

- **ಆದ್ಯತಾ / ವಿನಾಯಿತಿಗಳಿಗೆ ಇರುವ ಪ್ರಮಾಣ ಪತ್ರಗಳ ಪರಿಶೀಲನೆ:-**

ಸಕ್ಷಮ ಪ್ರಾಧಿಕಾರವು ಆದ್ಯತೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರ ಅರ್ಜಿಗಳನ್ನು ಅವರು ಸಲ್ಲಿಸಿರುವ ಮೂಲ ಪ್ರಮಾಣ ಪತ್ರಗಳೊಂದಿಗೆ ಪರಿಶೀಲಿಸಿ ಆದ್ಯತೆಗೆ / ವಿನಾಯಿತಿಗೆ ಅರ್ಹವಿದ್ದಲ್ಲಿ ಮಾತ್ರ ಪರಿಗಣಿಸತಕ್ಕದ್ದು. ಇಲ್ಲವಾದಲ್ಲಿ ಸಕಾರಣಗಳೊಂದಿಗೆ ತಿರಸ್ಕರಿಸತಕ್ಕದ್ದು. ಸದರಿ ಪ್ರಕ್ರಿಯೆಯನ್ನು ತಂತ್ರಾಂಶದಲ್ಲಿಯೇ ನಿರ್ವಹಿಸುವುದು.

ಒಂದು ಶಾಲೆಯಲ್ಲಿ ಒಂದೇ ವೃಂದದ/ ಒಂದೇ ಹುದ್ದೆ ಇದ್ದಲ್ಲಿ ಅಂತಹ ಶಿಕ್ಷಕರು ಸೆಕ್ಷನ್-10ರಡಿಯಲ್ಲಿ ವಿನಾಯಿತಿಗೆ ಅರ್ಹರಿದ್ದರೂ ಸಹಾ ಅಂತಹವರನ್ನು ವಿನಾಯಿತಿ ನೀಡದೇ ವಲಯ ವರ್ಗಾವಣೆಗೆ ಪರಿಗಣಿಸತಕ್ಕದ್ದು.

- **<u>ಕರಡು ಅರ್ಹ/ಅನರ್ಹ ಆದ್ಯತಾ ಪಟ್ಟಿ ಪ್ರಕಟಣೆ</u>:-**

ತಂತ್ರಾಂಶದಲ್ಲಿ ಜನರೇಟ್ ಮಾಡಿದ ಕರಡು ಅರ್ಹ ಆದ್ಯತಾ ಪಟ್ಟಿ ಮತ್ತು ಕರಡು ಅನರ್ಹ(ಕಾರಣಗಳ ಸಹಿತ) ಆದ್ಯತಾ ಪಟ್ಟಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಸೂಚನಾ ಫಲಕದಲ್ಲಿ ಪ್ರಕಟಿಸುವುದು. ಈ ಸಂಬಂಧ ಮಾಹಿತಿಯು ಶಿಕ್ಷಕ ಮಿತ್ರ ಆಪ್‌ನಲ್ಲಿ/ಇಇಡಿಎಸ್‌ನಲ್ಲಿ ಲಭ್ಯವಾಗುವ ಬಗ್ಗೆ ಪ್ರಚುರಪಡಿಸುವುದು.

- **<u>ಆಕ್ಷೇಪಣೆಗಳ ಸ್ವೀಕೃತಿ :-</u>**

ಕರಡು ಅರ್ಹ/ಅನರ್ಹ ಆದ್ಯತಾ ಪಟ್ಟಿಗೆ ಐದು ಕೆಲಸದ ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡುವುದು. ಸ್ವೀಕೃತವಾದ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯವರು ನಿಯಮಾನುಸಾರ ಪರಿಶೀಲಿಸುವುದು. ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಲು ಮುಕ್ತ ಆಲಿಕೆಗೆ ದಿನಾಂಕವನ್ನು ನಿಗದಿಪಡಿಸಿ ಪ್ರಕಟಿಸಿ ಪ್ರಚುರಪಡಿಸುವುದು. 05 ದಿನಗಳ ತರುವಾಯ ಬಂದ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

- **ಆಕ್ಷೇಪಣೆಗಳನ್ನು ಇತ್ಯರ್ಥಪಡಿಸುವುದು:-**

05 ದಿನಗಳ ಅವಧಿಯಲ್ಲಿ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಆದೇಶಗಳನ್ನು ಹೊರಡಿಸುವುದು ಮತ್ತು ತಂತ್ರಾಂಶದಲ್ಲಿ ಅಂತಿಮ ಅರ್ಹ/ಅನರ್ಹ ಆದ್ಯತೆಗಳನ್ನು ಇಂದೀಕರಿಸುವುದು.

- **ಅಂತಿಮ ಅರ್ಹ ಆದ್ಯತಾ ಪಟ್ಟಿ ಪ್ರಕಟಣೆ:-**

ತಂತ್ರಾಂಶದ ಮೂಲಕ ಜನರೇಟ್ ಮಾಡಿದ ಅಂತಿಮ ಅರ್ಹ ಆದ್ಯತಾ ಪಟ್ಟಿಯನ್ನು ಪ್ರಕಟಿಸುವುದು. ಯಾವುದೇ ಶಿಕ್ಷಕರು ಒಂದಕ್ಕಿಂತ ಹೆಚ್ಚು ಆದ್ಯತೆಗೆ ಅರ್ಹರಾಗಿದ್ದಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ,2020[2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04]ರ ಸೆಕ್ಷನ್ 10ರ ಅನುಕ್ರಮದಂತೆ ಮೊದಲ ಆದ್ಯತೆಯನ್ನು ಪರಿಗಣಿಸಲಾಗುವುದು.

Φ **<u>ವರ್ಗಾವಣಾ ಅರ್ಜಿಗಳ ಕುರಿತು ಕ್ಷೇತ್ರಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು, ವಿಭಾಗೀಯ ಸಹನಿರ್ದೇಶಕರು ಮತ್ತು ಸದರಿ ಪ್ರಾಧಿಕಾರಿಯವರಿಂದ ಅಂತಿಮಗೊಂಡಂತೆ ಸಂದರ್ಭಾನುಸಾರ ಆಯಾ ವರ್ಗಾವಣಾ ಪ್ರಾಧಿಕಾರಿಯವರು ಅಂತಿಮ ಅರ್ಹ ಆದ್ಯತಾ ಪಟ್ಟಿ ಪ್ರಕಟಣೆಗೆ ಮತ್ತು ಕೋರಿಕೆ ವರ್ಗಾವಣೆಯ ಕೌನ್ಸಿಲಿಂಗ್‌ಗೆ ಕೈಗೊಳ್ಳಬೇಕಾದ ಕ್ರಮಗಳು</u>** :

- ಶೇಕಡ 25 ಕ್ಕಿಂತ ಹೆಚ್ಚು ಖಾಲಿ ಸ್ಥಾನ ಇರುವ ತಾಲ್ಲೂಕಿನಿಂದ ಸ್ವೀಕರಿಸಲಾದ ಅರ್ಜಿಯನ್ನು ವರ್ಗಾವಣೆಗೆ ಪರಿಗಣಿಸತಕ್ಕದ್ದಲ್ಲ ಆದರೆ ತಿದ್ದುಪಡಿ ಕಾಯ್ದೆ/ನಿಯಮ-2022ರಂತೆ ಅರ್ಹರಿರುವ ಅರ್ಜಿಗಳನ್ನು ಪರಿಗಣಿಸಲಾಗುವುದು.
- ಪ್ರತಿಯೊಬ್ಬ ಅರ್ಜಿದಾರ ಶಿಕ್ಷಕರ ಮೂಲ ಸೇವಾವಹಿಯನ್ನು ಪರಿಶೀಲಿಸಿ ಬೋಧನಾ ವಿಷಯ/ಬೋಧನಾ ಮಾಧ್ಯಮ/ನೇಮಕಾತಿಯಲ್ಲಿ ವಿಧಿಸಿರುವ ಷರತ್ತು ಇವುಗಳನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಇ.ಇ.ಡಿ.ಎಸ್ ಹಾಗೂ ವರ್ಗಾವಣಾ ತಂತ್ರಾಂಶದಲ್ಲಿ ನಮೂದಾಗಿರುವ ವಿವರಗಳೊಂದಿಗೆ ತಾಳೇ ಮಾಡಿ ನಂತರವೇ ಅಂಗೀಕಾರ ನೀಡುವುದು.
- ವರ್ಗಾವಣೆಗಳಿಗಾಗಿ ಕೌನ್ಸಿಲಿಂಗನ್ನು ಅಧಿನಿಯಮದ 10ನೇ ಪ್ರಕರಣದ (i) ರಿಂದ (v) ಖಂಡಗಳು ಮತ್ತು ಸಾಮಾನ್ಯ ವರ್ಗಗಳ ಅಡಿಯಲ್ಲಿ ಅನುಕ್ರಮವಾಗಿ ಕೈಗೊಳ್ಳತಕ್ಕದ್ದು.
- ಆದ್ಯತೆಯನ್ನು, ಪ್ರತಿಯೊಂದು ಪ್ರವರ್ಗದೊಳಗೆ, ಆದ್ಯತೆಯ ಕ್ರಮಾನುಸಾರ ತೀರ್ಮಾನಿಸತಕ್ಕದ್ದು.
- ಅಧಿನಿಯಮದ 10ನೇ ಪ್ರಕರಣದ ನಿಯಮಗಳಿಗನುಸಾರ (3)(5) ನೇ ಖಂಡದ ಮೇರೆಗೆ ಸಾಮಾನ್ಯ ವರ್ಗಾವಣೆಗಳನ್ನು 5ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ವರ್ಗಾವಣೆ ಮಿತಿಯೊಳಗೆ ಮಾಡತಕ್ಕದ್ದು.
- ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರು, ಯಾವುದೇ ಲಭ್ಯ ಖಾಲಿ ಸ್ಥಾನವನ್ನು ಆಯ್ಕೆ ಮಾಡಿಕೊಳ್ಳಬಹುದು. ವರ್ಗಾವಣೆ ಮಾಡುವ ಪ್ರಾಧಿಕಾರವು, ಸ್ವತಃ ಕೌನ್ಸಿಲಿಂಗ್ ಕೇಂದ್ರದಲ್ಲಿ ಕಂಪ್ಯೂಟರ್ ಜನರೇಟೆಡ್ ವರ್ಗಾವಣೆ ಆದೇಶವನ್ನು ನೀಡತಕ್ಕದ್ದು. ಸೂಕ್ತ ಖಾಲಿ ಹುದ್ದೆ ಲಭ್ಯವಿಲ್ಲದಿದ್ದರೆ, ಶಿಕ್ಷಕ ಹಾಲಿ ಇರುವ ಹುದ್ದೆಯಲ್ಲಿ ಮುಂದುವರೆಯಬಹುದಾಗಿದೆ. ಈ ಸಂಬಂಧ ಶಿಕ್ಷಕನಿಂದ ವಚನಾದೇಶವನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರವು ಕೌನ್ಸಿಲಿಂಗ್ ಕೇಂದ್ರದಲ್ಲಿ ಪಡೆದುಕೊಳ್ಳತಕ್ಕದ್ದು. ಆದಾಗ್ಯೂ, ಖಾಲಿ ಹುದ್ದೆಯನ್ನು ಒಂದು ಬಾರಿ ಆಯ್ಕೆ ಮಾಡಿಕೊಂಡರೆ ಅದನ್ನು ಮಾರ್ಪಾಡು ಮಾಡತಕ್ಕದ್ದಲ್ಲ ಅಥವಾ ರದ್ದುಗೊಳಿಸತಕ್ಕದ್ದಲ್ಲ.

- ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ವರ್ಗಾವಣಾ ಆದೇಶ ರದ್ದತಿ ಅಥವಾ ಮಾರ್ಪಾಡಿಗೆ ಮನವಿ ಸಲ್ಲಿಸಿದಲ್ಲಿ ಅಥವಾ ರಾಜಕೀಯ ಒತ್ತಡ ತಂದಲ್ಲಿ ನಡತೆ ನಿಯಮ-2021 ನ್ನು ಉಲ್ಲಂಘಿಸಿದ ಆರೋಪದಡಿಯಲ್ಲಿ ಅಂತಹಾ ಶಿಕ್ಷಕನ ವಿರುದ್ಧ ಶಿಸ್ತು ಕ್ರಮವನ್ನು ಸಕ್ಷಮ ಪ್ರಾಧಿಕಾರಿಗಳು ಜರುಗಿಸತಕ್ಕದ್ದು.
- ಯಾರೇ ಇಬ್ಬರು ಶಿಕ್ಷಕರ ಸೇವಾ ಅಂಕ ಒಂದೇ ಆಗಿದ್ದರೆ, ಆಗ ಜೇಷ್ಠತೆಯನ್ನು ಜನ್ಮ ದಿನಾಂಕದ ಆಧಾರದ ಮೇಲೆ ನಿರ್ಧರಿಸುವುದು. ಜನ್ಮ ದಿನಾಂಕವೂ ಸಹ ಒಂದೇ ಆಗಿದ್ದರೆ ಆಗ ಸೇವೆಗೆ ಸೇರಿದ ದಿನಾಂಕದ ಆಧಾರದ ಮೇಲೆ ಜೇಷ್ಠತೆಯನ್ನು ನಿರ್ಧರಿಸುವುದು.
- ಜಿಲ್ಲೆಯೊಳಗೆ ವರ್ಗಾವಣೆಗೆ ಕೋರಿಕೆಗಳನ್ನು, ಕೌನ್ಸಿಲಿಂಗ್‌ನ ಮೊದಲನೆ ಸುತ್ತಿನಲ್ಲಿ ಪರಿಗಣಿಸತಕ್ಕದ್ದು, ಜಿಲ್ಲೆಯ ಹೊರಗೆ ವರ್ಗಾವಣೆಗೆ ಕೋರಿಕೆಗಳನ್ನು ಕೌನ್ಸಿಲಿಂಗ್‌ನ ಮುಂದಿನ ಸುತ್ತಿನಲ್ಲಿ ಪರಿಗಣಿಸತಕ್ಕದ್ದು.
- ಜೇಷ್ಠತಾ ಘಟಕದ ಹೊರಗಿನ ಕೋರಿಕೆ ವರ್ಗಾವಣೆಯಲ್ಲಿ ಆ ಘಟಕದ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂತಹ ಘಟಕಗಳಿಗೆ ಶಿಕ್ಷಕರ ಕೋರಿಕೆ ವರ್ಗಾವಣೆಯನ್ನು ಪರಿಗಣಿಸತಕ್ಕದ್ದಲ್ಲ.

### ಕೌನ್ಸಿಲಿಂಗ್‌ನ್ನು ಪೂರ್ಣಗೊಳಿಸುವುದು.-

ನಿಯಮ-23 ರಂತೆ ವಲಯ ಮತ್ತು ಕೋರಿಕೆ ವರ್ಗಾವಣೆಗಳ ಮೇರೆಗೆ, ಕಂಪ್ಯೂಟರೈಸ್ಡ್ ಕೌನ್ಸಿಲಿಂಗ್ ಪ್ರಕ್ರಿಯೆ ಮುಖಾಂತರ ವರ್ಗಾವಣೆ ನಿರ್ವಹಣೆಯನ್ನು 5ನೇ ನಿಯಮದ ಮೇರೆಗೆ ವರ್ಗಾವಣೆಗಳ ಗರಿಷ್ಠ ಪರಿಮಿತಿ ಸಂಖ್ಯೆಯು ತಲುಪುವವರೆಗೂ ಅಥವಾ ಎಲ್ಲಾ ಅರ್ಜಿದಾರರು ಮುಕ್ತಾಯವಾಗುವವರೆಗೆ ವರ್ಗಾವಣಾ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯು ನಿಗಧಿಪಡಿಸುವ ಕಾಲಮಿತಿವರೆಗೆ ಮುಂದುವರೆಯತಕ್ಕದ್ದು.

### ವರ್ಗಾವಣೆ ಆದೇಶಗಳನ್ನು ನೀಡುವುದು.-

ನಿಯಮ-25 ರಂತೆ ಸಕ್ಷಮ ಪ್ರಾಧಿಕಾರವು, ಕೌನ್ಸಿಲಿಂಗ್ ಕೇಂದ್ರದಲ್ಲಿ ಕೌನ್ಸಿಲಿಂಗ್ ನಡೆಯುವ ಅದೇ ದಿನದಂದು, ಸಂಬಂಧಿಸಿದ ಶಿಕ್ಷಕನಿಗೆ ಕಂಪ್ಯೂಟರ್ ಜನರೇಟೆಡ್ ವರ್ಗಾವಣೆ ಆದೇಶವನ್ನು ನೀಡತಕ್ಕದ್ದು.

### ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು.-

ನಿಯಮ-26 ರಂತೆ ಪ್ರತಿಯೊಂದು ವರ್ಗಾವಣೆಯ ಮುಕ್ತಾಯದ ನಂತರ, ವರ್ಗಾವಣೆಗೊಂಡ ಶಿಕ್ಷಕರ ಪಟ್ಟಿಯಲ್ಲಿ ಅವರ ಹೆಸರಿನ ಮುಂದೆ ವರ್ಗಾವಣೆಗೊಂಡ ಸ್ಥಳಗಳನ್ನು ತೋರಿಸುವಂತೆ, ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಪಟ್ಟಿಯನ್ನು ಪ್ರದರ್ಶಿಸಿದ ತರುವಾಯ ವರ್ಗಾವಣೆ ಮಾಡತಕ್ಕದ್ದಲ್ಲ. ಪಟ್ಟಿಯನ್ನು ಪ್ರಕಟಿಸಿದ ತರುವಾಯ ವರ್ಗಾವಣೆ ನಿಯಂತ್ರಣ ಅಧಿಕಾರಿಯ ಪೂರ್ವಾನುಮತಿ ಇಲ್ಲದೆ ಯಾವುದಾದರೂ ವರ್ಗಾವಣೆಗಳನ್ನು ಮಾಡಿದರೆ, ಸಂಬಂಧಿಸಿದ ಸಕ್ಷಮ ಪ್ರಾಧಿಕಾರವನ್ನು ವೈಯಕ್ತಿಕ ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು.

### ಕುಂದುಕೊರತೆಗಳ ನಿವಾರಣೆ:-

ವರ್ಗಾವಣೆ ಅಧಿನಿಯಮ 2020ರ ಕಂಡಿಕೆ 09 ರಂತೆ ಸಾರ್ವಜನಿಕ ಶಿಕ್ಷಣದ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಇಲಾಖಾ ಅಧಿಕಾರಿಯನ್ನು ಆತನ ಅಧಿಕಾರ ವ್ಯಾಪ್ತಿಯೊಳಗಿನ ಎಲ್ಲಾ ವರ್ಗಾವಣೆ ಪ್ರಕ್ರಿಯೆಯನ್ನು ಮೇಲ್ವಿಚಾರಿಸಲು ಮತ್ತು ಯಾವುದೇ ಲಿಖಿತ ದೂರುಗಳನ್ನು ಆಲಿಸಲು ಕುಂದುಕೊರತೆ ನಿವಾರಣೆ ಅಧಿಕಾರಿಯನ್ನಾಗಿ ಆಯಾ ವಿಭಾಗೀಯ ಸಹ ನಿರ್ದೇಶಕರನ್ನು ಗೊತ್ತುಪಡಿಸಲಾಗಿದೆ. ಹಾಗೂ ಸ್ವೀಕರಿಸಲಾದ ಅಹವಾಲುಗಳ ಕುರಿತಂತೆ ನಿಗದಿತ ಅವಧಿಯೊಳಗೆ ಇತ್ಯರ್ಥಪಡಿಸಿ ಆದೇಶಗಳನ್ನು ಹೊರಡಿಸತಕ್ಕದ್ದು. ಅರ್ಜಿಗಳ ಸಂಬಂಧ ನಿಯಮಾನುಸಾರ ಕ್ರಮಗಳನ್ನು ಕೈಗೊಂಡು ಇತ್ಯರ್ಥಪಡಿಸುವುದು ಸದರಿ ಅಧಿಕಾರಿಯವರ ಜವಾಬ್ದಾರಿಯಾಗಿದ್ದು ಅನಗತ್ಯವಾಗಿ ಅರ್ಜಿಗಳನ್ನು ಅನ್ಯ ಕಛೇರಿಗೆ ಅಥವಾ ಕೇಂದ್ರ ಕಛೇರಿಗೆ ವರ್ಗಾಯಿಸಿದರೆ ಕರ್ತವ್ಯಲೋಪವೆಂಬುದಾಗಿ ಪರಿಗಣಿಸಲಾಗುವುದು.

ಹಾಗೆಯೇ ವ್ಯಾಪ್ತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ ಪ್ರಕರಣಗಳು ಉಂಟಾದಲ್ಲಿ ಸಹ ಆಯಾ ನ್ಯಾಯಾಲಯದಲ್ಲಿ ಕಾಯ್ದೆ-ನಿಯಮ-ಮಾರ್ಗಸೂಚಿಯಲ್ಲಿನ ನೀತಿಯಂತೆ ಪ್ಯಾರಾವಾರು ಉತ್ತರಗಳನ್ನು ನೀಡುವುದು / ಆಕ್ಷೇಪಣಾ ಹೇಳಿಕೆಗಳನ್ನು ಸಂಬಂಧಿತ ಸರ್ಕಾರಿ ವಕೀಲರ ಮುಖಾಂತರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿ ಪ್ರಕರಣ ಇತ್ಯರ್ಥವಾಗುವಂತೆ ಕ್ರಮವಹಿಸತಕ್ಕದ್ದು. ವರ್ಗಾವಣೆ ಸಂಬಂಧ ಕಾಯ್ದೆ-ನಿಯಮಗಳಂತೆ ನೀತಿಯು ಇರುತ್ತದೆ. ಅನಗತ್ಯವಾಗಿ ಕೇಂದ್ರ ಕಛೇರಿಯ ಮಾರ್ಗದರ್ಶನ ಕೋರತಕ್ಕದ್ದಲ್ಲ. ತಡೆಯಾಜ್ಞೆ ಉಂಟಾದಲ್ಲಿ ಶೀಘ್ರ ತೆರವಿಗೆ ಸಹ ಕ್ರಮವಹಿಸತಕ್ಕದ್ದು. ಈ ಬಗ್ಗೆ ರಿಜಿಸ್ಟರ್ ವಹಿ ನಿರ್ವಹಿಸತಕ್ಕದ್ದು ಮತ್ತು ಕಾಲಕಾಲಕ್ಕೆ ವರದಿಯನ್ನು ನಿಯಂತ್ರಣಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ನ್ಯಾಯಾಲಯಗಳ ವಿವಿಧ ಪೀಠಗಳಿರುವ ಹಿನ್ನಲೆಯಲ್ಲಿ, ಆಯಾ ಪೀಠಗಳ ಸ್ಥಿತ ವ್ಯಾಪ್ತಿಯ ಪ್ರಕರಣಗಳಿಗೆ ಆಯಾ ಪ್ರಾಧಿಕಾರಿಯವರೇ ಇಲಾಖೆಯ ಪರವಾಗಿ ಕ್ರಮಗಳನ್ನು ಕೈಗೊಳ್ಳಲು ಸಕ್ಷಮರಿರುತ್ತಾರೆ. ಒಂದು ವೇಳೆ ಇಲಾಖಾ ಆದೇಶ ಅಥವಾ ಸರ್ಕಾರದ

ಆದೇಶದ ಅಗತ್ಯವಿದ್ದಲ್ಲಿ ಆಯಾ ಪ್ರಾಧಿಕಾರಿಯವರು ಖುದ್ದು ಹಿಂಬಾಲಿಕ ಕ್ರಮಗಳನ್ನು ವಹಿಸಿ ಆದೇಶಗಳನ್ನು ಪಡೆದು ಕ್ರಮವಹಿಸುವ ಜವಾಬ್ದಾರಿ ಹೊಂದಿರುತ್ತಾರೆ.

ಕುಂದು ಕೊರತೆ ನಿವಾರಣೆ ಅಧಿಕಾರಿಯು ಹೊರಡಿಸಿದ ಆದೇಶದ ವಿರುದ್ಧ ಮೇಲ್ಮನವಿಯನ್ನು ಬೆಳಗಾವಿ ವಿಭಾಗಕ್ಕಾಗಿ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಧಾರವಾಡ, ಕಲಬುರಗಿ ವಿಭಾಗಕ್ಕಾಗಿ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕಾಗಿ ನಿರ್ದೇಶಕರು (ವರ್ಗಾವಣೆ ಘಟಕ) ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರುಗಳಲ್ಲಿ ಮಾಡತಕ್ಕದ್ದು. ಯಾವುದೇ ಅಧಿಕಾರಿಯು ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅದನ್ನು ಸಂಬಂಧಿತ ಶಿಸ್ತು ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.

- **ಸಹಾಯವಾಣಿ**:- ಪ್ರಸಕ್ತ ಸಾಲಿನ ವರ್ಗಾವಣೆಗೆ ಸಂಬಂಧಿಸಿದಂತೆ, ಶಿಕ್ಷಕರಿಗೆ ಮಾಹಿತಿಯನ್ನು ಒದಗಿಸಲು, ಸಂಬಂಧಿಸಿದ ಉಪನಿರ್ದೇಶಕರು[ಆಡಳಿತ] ರವರುಗಳ ಕಛೇರಿಗಳಲ್ಲಿ ಹಾಗೂ ಸಂಬಂಧಿಸಿದ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಈಗಾಗಲೇ ವರ್ಗಾವಣಾ ಉದ್ದೇಶಕ್ಕಾಗಿ ವರ್ಗಾವಣಾ ಕೋಶ (Transfer cell) ಎಂದು ರಚನೆಯಾಗಿದ್ದು, ಸದರಿ ವರ್ಗಾವಣೆ ಕೋಶದ ನೋಡಲ್ ಅಧಿಕಾರಿಗಳನ್ನು ಗುರುತಿಸಲಾಗಿದೆ. ಈ ಬಗ್ಗೆ ವ್ಯಾಪ್ತಿಯ ಎಲ್ಲಾ ಶಿಕ್ಷಕರ / ಸಾರ್ವಜನಿಕರ ಗಮನಕ್ಕೆ ವ್ಯಾಪಕವಾಗಿ ಪ್ರಚುರ ಪಡಿಸುವುದು ಮತ್ತು ಆಯಾ ಸೂಚನಾ ಫಲಕಗಳಲ್ಲಿಯೂ ಪ್ರಕಟಿಸತಕ್ಕದ್ದು. ಸದರಿ ಅಧಿಕಾರಿಗಳು ವರ್ಗಾವಣಾ ಸಂಬಂಧಿತ ವಿಚಾರಗಳಿಗೆ ಸಹಾಯವಾಣಿಯನ್ನು ಸ್ಥಾಪಿಸುವುದು. ವರ್ಗಾವಣಾ ಸಂಬಂಧಿತ ಸಮಸ್ಯೆಗಳಿಗೆ ಶಿಕ್ಷಕರು ಅಪೇಕ್ಷಿಸುವ ಮಾಹಿತಿಗೆ ಸಹಾಯವಾಣಿ ಮೂಲಕ ಪರಿಹಾರ ಒದಗಿಸುವುದು. ಕೌನ್ಸಿಲಿಂಗ್ ದಿನಾಂಕಗಳು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಲ್ಲಿ, ವರ್ಗಾವಣೆ ಕೋಶದಲ್ಲಿಯೇ (Transfer cell) ವೆಬ್ ಸೈಟ್ ಮೂಲಕ ಮಾಹಿತಿ ನೀಡಲು ಕ್ರಮವಹಿಸುವುದು.

- **ಇಲಾಖಾ ವೆಬ್ ಸೈಟ್‌ನಲ್ಲಿ ಮಾಹಿತಿ**:-

ವರ್ಗಾವಣಾ ವೇಳಾ ಪಟ್ಟಿಯಂತೆ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ನಿಯಮಾನುಸಾರ ನಡೆಸಬೇಕಾಗಿದ್ದು, ವರ್ಗಾವಣೆ ಬಗ್ಗೆ ಕಾಲಕಾಲಕ್ಕೆ ಹೆಚ್ಚಿನ ಮಾಹಿತಿ ಇತ್ಯಾದಿ ವಿಷಯದ ಬಗ್ಗೆ ಅಧಿಸೂಚನೆ/ಆದೇಶ/ಸುತ್ತೋಲೆಗಳನ್ನು ಹೊರಡಿಸಿದಲ್ಲಿ ಈ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಪ್ರತಿದಿನ ಇಲಾಖಾ Web Site www.schooleducationkarnataka.gov.in ಮತ್ತು www.sats.karnataka.gov.in ಹಾಗೂ Transfer cell ಇ-ಮೇಲ್ sadpiegov.trcell2024@edukar.gov.in ಇಂದ ಸ್ವೀಕೃತ ಮೇಲ್ ಗಳನ್ನು ಪರಿಶೀಲಿಸಿಕೊಂಡು ಮಾಹಿತಿ ಪಡೆದುಕೊಂಡು ಅದರಂತೆ ಕ್ರಮವಹಿಸಲು ತಿಳಿಸಿದೆ ಹಾಗೂ ಈ ವರ್ಗಾವಣಾ ಪ್ರಕ್ರಿಯೆಯು ನಿಗಧಿತ ಕಾಲಮಿತಿಯೊಳಗೆ ಪೂರ್ಣಗೊಳ್ಳಬೇಕಾಗಿರುವುದರಿಂದ, ಈ ಕೆಲಸವನ್ನು ಬಹಳ ಎಚ್ಚರಿಕೆಯಿಂದ ಯಾವುದೇ ಲೋಪಗಳಿಗೆ ಹಾಗೂ ಗೊಂದಲಗಳಿಗೆ ಆಸ್ಪದ ನೀಡದಂತೆ ಕ್ರಮ ವಹಿಸಲು ತಿಳಿಸಿದೆ. ಪ್ರತಿಯೊಂದು ಸಂದರ್ಭದಲ್ಲಿ ಅಗತ್ಯ ಸೂಚನಾ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಿಯವರು ಹಾಗು ವಿಭಾಗೀಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಯವರು ಪತ್ರಿಕಾ ಪ್ರಕಟಣೆಗಳನ್ನು ನೀಡಿ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು.

**: ವರ್ಗಾವಣೆ ಪ್ರಕ್ರಿಯೆಯ ಅಧಿಕೃತ ಜ್ಞಾಪನ ಹೊರಡಿಸುವುದು :**

| ಪ್ರಾಥಮಿಕ ಮತ್ತು ಪ್ರೌಢಶಿಕ್ಷಕರ ಸಂಬಂಧ | ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಸಂಬಂಧ |
|---|---|
| ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನಿರ್ದೇಶಕರು ಆಯುಕ್ತರ ಕಛೇರಿ, ಬೆಂಗಳೂರು<br>ಅಪರ ಆಯುಕ್ತಾಲಯದ ನಿರ್ದೇಶಕರು, ಕಲ್ಬುರ್ಗಿ ಮತ್ತು ಧಾರವಾಡ<br>ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು/ ಬೆಳಗಾವಿ/ ಕಲ್ಬುರ್ಗಿ<br>ಆಯುಕ್ತಾಲಯದ ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ]<br>ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, | ಜಂಟಿ ನಿರ್ಧೇಶಕರು(ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು.<br>ಸಹನಿರ್ದೇಶಕರು. ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ವಿಭಾಗ ಮತ್ತು ಮೈಸೂರು ವಿಭಾಗ<br>**ಬೆಳಗಾವಿ ವಿಭಾಗ**: ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಛೇರಿ ಧಾರವಾಡ.<br>**ಕಲಬುರ್ಗಿ ವಿಭಾಗ**: ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಛೇರಿ ಕಲಬುರುಗಿ |

ಬಿ.ಬಿ. ಕಾವೇರಿ

**(ಬಿ.ಬಿ. ಕಾವೇರಿ) ಭಾ.ಆ.ಸೇ.**
**ಆಯುಕ್ತರು.**
**ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು.**

ಕರ್ನಾಟಕಸರ್ಕಾರ

**ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**–560001

## ಅನುಬಂಧ–2

**I. ವರ್ಗಾವಣಾ ವೇಳಾ ಪಟ್ಟಿ :**

| ಕ್ರ.ಸ | ವಿವರ | ವೃಂದ | | | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|---|---|
| | ವರ್ಗಾವಣೆ ವಿಧ | ಪ್ರಾಥಮಿಕ ಶಿಕ್ಷಕರ ವೃಂದ | ಪ್ರೌಢಶಾಲಾ ಶಿಕ್ಷಕರ ವೃಂದ | ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದ | |
| | **ಅ. ವರ್ಗಾವಣಾ ಪ್ರಕ್ರಿಯೆಯ ಪೂರ್ವಭಾವಿ ಕ್ರಮಗಳು** | | | | |
| 1 | **ಶಾಲೆಗಳ ವಲಯಗಳ ಇಂದೀಕರಣ** : ತಾಲ್ಲೂಕು ಮತ್ತು ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯತ್, ನಗರ ಸಭೆ, ಪುರಸಭೆ, ಇತ್ಯಾದಿಗಳನ್ನು ಸರ್ಕಾರವು ಕಾಲಕಾಲಕ್ಕೆ ಮೇಲ್ದರ್ಜೆಗೆ ಪುನರ್‌ವಿಂಗಡಣೆ/ಮೇಲ್ದರ್ಜೆಗೆ ಏರಿಸಿದ್ದ ಕಾರಣ ಶಾಲೆಗಳ ವಲಯ ಬದಲಾವಣೆಗಳು ಆಗಿರುವ ಸಾಧ್ಯತೆಗಳಿರುತ್ತವೆ. ಸದರಿ ಸರ್ಕಾರದ ಆದೇಶಗಳನ್ನು ಪರಿಶೀಲಿಸಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣಾ ನಿಯಂತ್ರಣ ನಿಯಮಗಳು–2020ರ ನಿಯಮ 2(ಇ) ರಂತೆ ಕ್ರಮವಹಿಸುವುದು, ಮೇಲ್ಕಂಡ ಬದಲಾವಣೆಗಳನ್ನು ವರ್ಗಾವಣೆ ತಂತ್ರಾಂಶದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಲಾಗಿನ್‌ನಲ್ಲಿ ಇಂದೀಕರಿಸುವುದು. | 18/03/2024 ರಿಂದ 26/03/2024 | | | ಕ್ಷೇತ್ರಶಿಕ್ಷಣಾಧಿಕಾರಿಗಳು |
| 2 | ಇಂದೀಕರಿಸಿದಂತೆ ಪರಿಷ್ಕೃತ ಶಾಲಾ ವಲಯಗಳ ಮಾಹಿತಿ ಪ್ರಕಟ | 27/03/2024 | | | ಕ್ಷೇತ್ರಶಿಕ್ಷಣಾಧಿಕಾರಿಗಳು |
| 3 | ವಲಯ ಮಾಹಿತಿಗಳ ಬಗ್ಗೆ ಆಕ್ಷೇಪಣೆ ಸಲ್ಲಿಸುವುದು | 27/03/2024 ರಿಂದ 30/03/2024 | | | ಶಿಕ್ಷಕರುಗಳು |
| 4 | ಅಂತಿಮ ಶಾಲಾ ವಲಯ ಪಟ್ಟಿ ಪ್ರಕಟಣೆ ಮತ್ತು ಶಿಕ್ಷಕರ ವೇಟೆಡ್ ಅಂಕಗಳ ಪ್ರಕಟಣೆ. ಸದರಿ ಮಾಹಿತಿಯನ್ನು ಶಿಕ್ಷಕರ ಇ.ಇ.ಡಿ.ಎಸ್ ಲಾಗಿನ್‌ನಲ್ಲಿ ಪರಿಶೀಲಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. | 02/04/2024 | | | ಕ್ಷೇತ್ರಶಿಕ್ಷಣಾಧಿಕಾರಿಗಳು |
| 5 | ಶಿಕ್ಷಕರ ಸೇವಾ ವಿವರಗಳ/ವೇಟೆಡ್ ಅಂಕಗಳ ಪರಿಶೀಲನಾ ಕಾರ್ಯ | 27/03/2024 ರಿಂದ 05/04/2024 | | | ಶಿಕ್ಷಕರುಗಳು |
| 6 | ಶಿಕ್ಷಕರುಗಳ ಪ್ರಕಟಿತ ಸೇವಾ ವಿವರಗಳ/ವೇಟೆಡ್ ಅಂಕಗಳ ಬಗ್ಗೆ ಆಕ್ಷೇಪಣೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು/ ಡಿ.ಡಿ.ಒಗಳಿಗೆ ಸಲ್ಲಿಸಲು ಅವಕಾಶ. | 02/04/2024 ರಿಂದ 06/04/2024 | | | ಶಿಕ್ಷಕರುಗಳು |
| 7 | ಇ.ಇ.ಡಿ.ಎಸ್‌ನಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು/ ಡಿ.ಡಿ.ಒಗಳು ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿ ಇಂದೀಕರಿಸುವುದು | 10/04/2024 ರಿಂದ 18/04/2024 | | | ಕ್ಷೇತ್ರಶಿಕ್ಷಣಾಧಿಕಾರಿಗಳು/ ಡಿ.ಡಿ.ಒ |
| 8 | ಶಿಕ್ಷಕರ ವೇಟೇಡ್ ಅಂಕಗಳೊಂದಿಗೆ ಸೇವಾವಿವರದ ಅಂತಿಮ ಪಟ್ಟಿ ಪ್ರಕಟಣೆ | 20/04/2024 | | | ಕ್ಷೇತ್ರಶಿಕ್ಷಣಾಧಿಕಾರಿಗಳು / ಡಿ.ಡಿ.ಒ |

| | | | |
|---|---|---|---|
| | **ಆ. ವಲಯ ವರ್ಗಾವಣೆ ಕ್ರಮಗಳು** | | |
| 1 | 'ಎ' ವಲಯದಲ್ಲಿ ನಿರಂತರ 10 ವರ್ಷಕ್ಕಿಂತಲೂ ಹೆಚ್ಚು ಕಾಲ ಕತ್ಯವ್ಯ ನಿರ್ವಹಿಸುತ್ತಿರುವ ಶಿಕ್ಷಕರ ತಾತ್ಕಾಲಿಕ ಕರಡು ಪಟ್ಟಿ ಪ್ರಕಟಣೆ | 08/04/2024 | ಕ್ಷೇತ್ರಶಿಕ್ಷಣಾಧಿಕಾರಿಗಳು |
| 2 | ಪ್ರಕಟಿತ ತಾತ್ಕಾಲಿಕ ಕರಡು ಪಟ್ಟಿಗೆ ಆಕ್ಷೇಪಣೆಗಳನ್ನು ಆಹ್ವಾನಿಸುವುದು. ಹಾಗೂ ಸೆಕ್ಷನ್-10ರಡಿಯಲ್ಲಿ ವಲಯ ವರ್ಗಾವಣೆಯಿಂದ ವಿನಾಯಿತಿ ಕೋರಿ ಪೂರಕ ದಾಖಲೆಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿ | 08/04/2024<br>ರಿಂದ<br>15/04/2024 | ಶಿಕ್ಷಕರು |
| 3 | 'ಎ' ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆ/ದಾಖಲೆಗಳ ಆನ್‌ಲೈನ್‌ನಲ್ಲಿ ಪರಿಶೀಲಿಸುವುದು ಹಾಗೂ ಒಪ್ಪುವ/ತಿರಸ್ಕರಿಸುವ ಬಗ್ಗೆ ನಿರ್ಧಾರ | 10/04/2024<br>ರಿಂದ<br>20/04/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| | ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ವಲಯ ವರ್ಗಾವಣೆಗೆ ಅರ್ಹ ಶಿಕ್ಷಕರ ಆಧ್ಯತೆಯ ಕರಡು ಪಟ್ಟಿ | 22/04/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| | **ಇ. ನಿರ್ಧಿಷ್ಟಪಡಿಸಿದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ವರ್ಗಾವಣೆ** | | |
| 1 | ದಿನಾಂಕ: 31/05/2024ಕ್ಕೆ ಗರಿಷ್ಠ 5 ವರ್ಷದ ಅವಧಿ ಪೂರ್ಣಗೊಂಡು ನಿರ್ದಿಷ್ಠಪಡಿಸಿದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಕರಡು ಪಟ್ಟಿ ಪ್ರಕಟಣೆ. | 08/04/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| 2 | ಪ್ರಕಟಿತ ಕರಡು ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಆಹ್ವಾನಿಸುವುದು. ಸೆಕ್ಷನ್-10ರಡಿಯಲ್ಲಿ ಕೌನ್ಸಿಲಿಂಗ್ ಆಧ್ಯತೆ ಕೋರಿ ಪೂರಕ ದಾಖಲೆಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿ | 08/04/2024<br>ರಿಂದ<br>15/04/2024 | ಶಿಕ್ಷಕರು |
| 3 | ಆಕ್ಷೇಪಣೆ/ದಾಖಲೆಗಳ ಪರಿಶೀಲನೆ | 16/04/2024 ರಿಂದ 20/04/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| 4 | ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ನಿರ್ಧಿಷ್ಟಪಡಿಸಿದ ಹುದ್ದೆಗಳ ವರ್ಗಾವಣೆಗೆ ಅರ್ಹ ಶಿಕ್ಷಕರ ಕರಡು ಪಟ್ಟಿ | 22/04/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| | **ಈ. ಕೋರಿಕೆ /ಪರಸ್ಪರ ವರ್ಗಾವಣೆ ಕ್ರಮಗಳು** | | |
| 1 | 1. ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳಿಗೆ ಶಿಕ್ಷಕರಿಂದ ಅರ್ಜಿಗಳನ್ನು ಆಹ್ವಾನಿಸುವುದು. ಅರ್ಜಿ ಸಲ್ಲಿಕೆಗೆ ಅವಧಿ ಮತ್ತು ಘಟಕದೊಳಗಿನ ಮತ್ತು ಹೊರಗೆ ಕೋರಿಕೆ ವರ್ಗಾವಣೆಗಳಿಗೆ ಮತ್ತು ಪರಸ್ಪರ ವರ್ಗಾವಣೆಗಳಿಗೆ ಅರ್ಜಿಗಳ ಆಹ್ವಾನ ಮತ್ತು ಸದರಿ ಅರ್ಜಿಯಲ್ಲಿಯೇ ಆದ್ಯತೆಯನ್ನು ಕೋರಲು ದಾಖಲೆ ಸಲ್ಲಿಸಲು ಅವಕಾಶ.<br>2. ಕನಿಷ್ಟ(3) ವರ್ಷ ಅವಧಿ ಪೂರೈಸಿದ ಹಾಗೂ ಗರಿಷ್ಠ(5) ವರ್ಷ ಅವಧಿ ಪೂರೈಸದ ನಿರ್ದಿಷ್ಠಪಡಿಸಿದ ಹುದ್ದೆಗಳಲ್ಲಿ ಕರ್ತವ್ಯ ನಿರತರು ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ವರ್ಗಾವಣೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು/ಆಧ್ಯತೆ ಕ್ಲೇಮ್ ಮಾಡಲು ಅವಕಾಶ<br>3. ವಲಯ ವರ್ಗಾವಣೆಗೆ ಅರ್ಹರಿರುವ ಶಿಕ್ಷಕರು ಸಹ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br>ಮೇಲಿನಂತೆ ಅರ್ಜಿ ಸಲ್ಲಿಸುವ ಶಿಕ್ಷಕರು ಆನ್‌ಲೈನ್ ತಂತ್ರಾಂಶದಲ್ಲಿ ಮಾತ್ರ ಅರ್ಜಿಯನ್ನು ಸಲ್ಲಿಸುವುದು ಮತ್ತು ಪೂರಕ ಮೂಲ ದಾಖಲೆಗಳನ್ನು ಅಪ್‌ಲೋಡ್ ಮಾಡಲು ನಿಗಧಿಪಡಿಸಿದ ಅವಧಿ. | 15/04/2024<br>ರಿಂದ<br>15/05/2024 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರುಗಿ ಅಪರ ಆಯುಕ್ತಾಲಯ<br><br>ಹಾಗೂ ವರ್ಗಾವಣೆ ಬಯಸುವ ಶಿಕ್ಷಕರ / ಮುಖ್ಯಶಿಕ್ಷಕರ ವೃಂದ |

| | | | |
|---|---|---|---|
| 2 | • ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳಿಗೆ ಅರ್ಜಿ ಸಲ್ಲಿಸಿರುವ ಶಿಕ್ಷಕರ ಪಟ್ಟಿ ಪ್ರಕಟಣೆ.<br>ಜಿಲ್ಲೆಯ ಒಳಗೆ / ವಿಭಾಗದ ಒಳಗೆ / ವಿಭಾಗದ ಹೊರಗೆ ಕೋರಿಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರುಗಳ ಕರಡು ಅರ್ಹ/ಅನರ್ಹ ಪಟ್ಟಿ ಪ್ರಕಟಣೆ.<br>(ಅಂಕಗಳ ಸಹಿತ ಮತ್ತು ವಿವಿಧ ಆದ್ಯತೆಗಳ ಸಹಿತ)[ತಂತ್ರಾಂಶದಲ್ಲಿದ್ದಂತೆ]<br>• ಕನಿಷ್ಟ(3) ವರ್ಷ ಅವಧಿ ಪೂರೈಸಿದ ಹಾಗೂ ಗರಿಷ್ಠ(5) ವರ್ಷ ಅವಧಿ ಪೂರೈಸದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಶಿಕ್ಷಕರ ಕರಡು ಪಟ್ಟಿ ಪ್ರಕಟಣೆ. | 18/05/2024 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರುಗಿ ಅಪರ ಆಯುಕ್ತಾಲಯ |
| 3 | ಕರಡು ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅವಧಿ | 20/05/2024<br>ರಿಂದ<br>24/05/2024 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರುಗಿ ಅಪರ ಆಯುಕ್ತಾಲಯ |
| 4 | ಜಿಲ್ಲೆಯ ಒಳಗೆ / ವಿಭಾಗದ ಒಳಗೆ / ವಿಭಾಗದ ಹೊರಗೆ ಕೋರಿಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ | 28/05/2024<br>ರಿಂದ<br>30/05/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| 5 | ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಆಧ್ಯತಾ ಪಟ್ಟಿ ಪ್ರಕಟಣೆ | 31/05/2024 | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| 6 | ಮೇಲಿನಂತೆ ಪ್ರಕಟಿಸಿರುವ ಪಟ್ಟಿಗೆ ಸಾರ್ವಜನಿಕ ಕುಂದು ಕೊರತೆ ಅಧಿಕಾರಿಗಳಿಗೆ ಬಾದಿತ ಶಿಕ್ಷಕರು ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅವಧಿ. | ದಿನಾಂಕ: 01/06/2024 ರಿಂದ 05/06/2024 ರವರೆಗೆ ಸಂಬಂಧಿಸಿದ ಪಟ್ಟಿಯಿಂದ ಬಾದಿತ ಶಿಕ್ಷಕರು ವಿಭಾಗೀಯ ಸಹನಿರ್ದೇಶಕರಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸುವುದು. ದಿನಾಂಕ: 06/06/2024 ರಂದು ವಿಭಾಗೀಯ ಜಂಟಿ ನಿರ್ದೇಶಕರು ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಆಲಿಕೆ ನಿಗಧಿಪಡಿಸಿ ಆಲಿಕೆ ಪ್ರಕ್ರಿಯೆಯವನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಜಂಟಿನಿರ್ದೇಶಕರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳು/ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಪರಿಗಣಿಸಬಹುದಾದ ಮತ್ತು ಪರಿಗಣಿಸಲು ಅನರ್ಹ ಪ್ರಕರಣಗಳ ಪಟ್ಟಿಯನ್ನು ಕಾರಣ ಸಹಿತ ವಿವರವಾದ ವರದಿಯನ್ನು ದಿನಾಂಕ: 07/06/2024 ರಂದು ಆಯಾ ವರ್ಗಾವಣಾ ಪ್ರಾಧಿಕಾರಿಗಳಿಗೆ ಸಲ್ಲಿಸುವುದು . ಅನರ್ಹ ಶಿಕ್ಷಕರಿಗೆ ವ್ಯಾಪ್ತಿಯ ಜಂಟಿ ನಿರ್ದೇಶಕರು ವಿವರವಾದ ಸೂಕ್ತ ಹಿಂಬರಹವನ್ನು ನೀಡುವುದು | |
| **ಉ** | **ವಲಯ ವರ್ಗಾವಣೆ/ನಿರ್ಧಿಷ್ಟಪಡಿಸಿದ ಹುದ್ದೆಗಳ ವರ್ಗಾವಣೆ/ಕೋರಿಕೆ/ಪರಸ್ಪರ ವರ್ಗಾವಣೆ ಅಂತಿಮ ಆಧ್ಯತಾ ಪಟ್ಟಿ ಪ್ರಕಟಣೆ** | | |
| 1 | ನಿರ್ಧಿಷ್ಟ ಪಡಿಸಿದ ಹುದ್ದೆಗಳಲ್ಲಿ ಗರಿಷ್ಟ ಸೇವೆ ಸಲ್ಲಿಸಿರುವ ಮತ್ತು ವಲಯ ವರ್ಗಾವಣೆಗೆ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಅಂತಿಮ ಆಧ್ಯತಾ ಪಟ್ಟಿ ಪ್ರಕಟ | 10/06/2024 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| 2 | ಕೋರಿಕೆ ಮತ್ತು ಪರಸ್ಪರ ವರ್ಗಾವಣಾ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಅಂತಿಮ ಆಧ್ಯತಾ ಪಟ್ಟಿ ಪ್ರಕಟ | 12/06/2024 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| 3 | ದಿನಾಂಕ: 31/05/2024 ರಲ್ಲಿದ್ದಂತೆ ಖಾಲಿ ಹುದ್ದೆಗಳ ಪ್ರಕಟಣೆ. | 13/06/2024 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |

| | | |
|---|---|---|
| **ಊ** | **ಕೌನ್ಸಿಲಿಂಗ್ ದಿನಾಂಕಗಳನ್ನು ನಂತರ ಪ್ರಕಟಿಸಲಾಗುವುದು.** | |

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020 ಬೆಂಗಳೂರು ದಿನಾಂಕ:27/03/2020 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020 ದಿನಾಂಕ:22/07/2020 ಹಾಗೂ ಇಲಾಖಾ ಆದೇಶಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು, ಪ್ರಸ್ತಾಪಿತ ವರ್ಗಾವಣಾ ಪ್ರಕ್ರಿಯೆಗಳನ್ನು ಯಾವುದೇ ಲೋಪದೋಷಗಳಿಗೆ ಎಡೆಮಾಡಿಕೊಡದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ತಿಳಿಸಿದೆ. ಒಂದು ವೇಳೆ ಇಲಾಖಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅರ್ಜಿಗಳ ಅನುಮೋದನೆ ಮತ್ತು ವರ್ಗಾವಣಾ ಕೌನ್ಸಿಲಿಂಗ್‌ನಲ್ಲಿ ಅಕ್ರಮಗಳು ಕಂಡುಬಂದಲ್ಲಿ ಅಂತಹಾ ಸಕ್ಷಮ ಪ್ರಾಧಿಕಾರದ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು.

**(ಬಿ.ಬಿ. ಕಾವೇರಿ)** ಭಾ.ಆ.ಸೇ.
ಆಯುಕ್ತರು.
ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು.